# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮಾರ್ಚ್ 05, 2022

ಸಂಪುಟ : 48 ಸಂಚಿಕೆ : 294 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಸಮುದಾಯಗಳನ್ನು ಸರಿದೂಗಿಸುವ ಬಜೆಟ್

## ಮದ್ಯ ಸೇರಿ ಯಾವುದರ ಮೇಲೂ ತೆರಿಗೆ ಹೇರಿಕೆ ಇಲ್ಲ. ಕೃಷಿ, ನೀರಾವರಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣಕ್ಕೆ ಒತ್ತು

ಬೆಂಗಳೂರು, ಮಾ.4- ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಸಮುದಾಯಗಳನ್ನು ತೃಪ್ತಿಪಡಿಸುವ ಪ್ರಯತ್ನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮುಂಗಡ ಪತ್ರದಲ್ಲಿ ಮಾಡಿದ್ದಾರೆ.

ಒಂದು ದಶಕದ ನಂತರ ಮದ್ಯ ಸೇರಿದಂತೆ ಯಾವುದರ ಮೇಲೂ ತೆರಿಗೆ ಹೇರದೆ, ಎಲ್ಲಾ ವಲಯಗಳಿಗೂ ಯೋಜನೆ ಪ್ರಕಟಿಸಿದ್ದಾರೆ.

ಆರ್ಥಿಕ ಸಂಕಷ್ಟದ ನಡುವೆಯೂ ಕೃಷಿ, ನೀರಾವರಿ, ಸಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಶಿಕ್ಷಣಕ್ಕೆ ಒತ್ತು ನೀಡಿರುವ ಮುಖ್ಯಮಂತ್ರಿಗಳು ಇರುವ ಸಂಪನ್ಮೂಲಗಳ ಜೊತೆಗೆ 72,000 ಕೋಟಿ ರೂ. ಸಾಲ ತರುವುದಾಗಿ ತಿಳಿಸಿದ್ದಾರೆ.

ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಇಂದು ತಮ್ಮ ಚೊಚ್ಚಲ ಬಜೆಟ್ ಮಂಡಿಸಿ, ಯಾವ ಸಮುದಾಯದ ಮೇಲೂ ಭಾರ ಹೊರಿಸದೆ ಎಲ್ಲರಿಗೂ ಏನೋ ನೀಡಿದ್ದೇನೆ ಎಂಬ ಭಾವನೆ ಮೂಡಿಸಿದ್ದಾರೆ.

ಸಾಲ ಎತ್ತುವ ಉದ್ದೇಶದಿಂದಲೇ ಯೋಜನಾ ಗಾತ್ರವನ್ನು 2.65 ಲಕ್ಷ ಕೋಟಿ ರೂ.ಗೆ ಹಿಗ್ಗಿಸಿದ್ದಾರೆ.

ರೈತರು, ಮಹಿಳೆಯರು, ಮಕ್ಕಳು ಸೇರಿದಂತೆ ಸಮಾಜದ ಎಲ್ಲರಿಗೆ ಬಜೆಟ್ ಮೂಲಕ ಶಕ್ತಿ ದೊರಕಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಮುಖ್ಯಮಂತ್ರಿ ಅವರು, ಬಜೆಟ್ ಗಾತ್ರವನ್ನು ಸರಿದೂಗಿಸಲು 2022-23 ರಲ್ಲಿ ಒಟ್ಟು ಎಪ್ಪತ್ತೆರಡು ಸಾವಿರ ಕೋಟಿ ರೂಪಾಯಿ ಸಾಲ ಪಡೆಯಲಾಗುವುದು ಎಂದರು.


ಇದರಿಂದ ರಾಜ್ಯದ ಒಟ್ಟು ಸಾಲದ ಪ್ರಮಾಣ ಐದು ಲಕ್ಷ ಕೋಟಿ ರೂಪಾಯಿಗಳ ಗಡಿ ದಾಟಿ ಒಟ್ಟು 5,18,366 ಕೋಟಿ ರೂಪಾಯಿಗಳಷ್ಟಾಗಲಿದೆ.

ಆಂತರಿಕ ಸಂಪನ್ಮೂಲ ಮತ್ತು ಸಾಲದ ಹಣದಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಾಗಿ ಪ್ರಕಟಿಸಿದ್ದಲ್ಲದೆ, ಅವಿವಾಹಿತ, ವಿಚ್ಛೇದಿತ ಮಹಿಳೆಯರಿಗೆ ನೀಡಲಾಗುವ ಮಾಸಾಶನವನ್ನು 600 ರೂ.ನಿಂದ 800 ರೂ.ಗಳಿಗೆ, ಹಾಗೂ ಆಸಿಡ್ ದಾಳಿ ಸಂತ್ರಸ್ತ ಮಹಿಳೆಯರ ಮಾಸಾಶನ 10,000 ರೂ.ಗೆ ಏರಿಕೆ ಮಾಡಲಾಗಿದೆ ಎಂದಿದ್ದಾರೆ.

50 ವರ್ಷ ಮೀರಿದ ಕುಸ್ತಿ ಪಟುಗಳಿಗೆ ಮಾಸಾಶನ ಮೊತ್ತ ಒಂದು ಸಾವಿರ ರೂ.ಗೆ ಹೆಚ್ಚಳ, ಆಶಾ ಕಾರ್ಯಕರ್ತರು, ಗ್ರಾಮ ಸಹಾಯಕರಿಗೆ, ಬಿಸಿ ಊಟ ತಯಾರಕರು ಮತ್ತು ಸಹಾಯಕರಿಗೆ ತಲಾ ಒಂದು ಸಾವಿರ ರೂ. ಗೌರವ ಧನ ಹೆಚ್ಚಳ ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತರಿಗೆ ಸೇವಾನುಭವ ಆಧಾರದಲ್ಲಿ ಒಂದು ಸಾವಿರದಿಂದ 1,500 ರಷ್ಟು ಗೌರವ ಧನ ಹೆಚ್ಚಳ, ಪೌರ ಕಾರ್ಮಿಕರಿಗೆ ಮಾಸಿಕ 2000 ರೂ. ಸಂಕಷ್ಟ (2ನೇ ಪುಟಕ್ಕೆ)

### ಬಜೆಟ್ ಮುಖ್ಯಾಂಶಗಳು

- ಮೇಕೆದಾಟು ಯೋಜನೆಗೆ 1 ಸಾವಿರ ಕೋಟಿ ರೂ.
- ಭದ್ರಾ ಮೇಲ್ದಂಡೆ ಯೋಜನೆಗೆ 3 ಸಾವಿರ ಕೋ.ರೂ.
- ಎತ್ತಿನಹೊಳೆ ಯೋಜನೆಗೆ 3 ಸಾವಿರ ಕೋಟಿ ರೂ.
- ಕೃಷ್ಣಾ ಮೇಲ್ದಂಡೆ 3ನೇ ಹಂತಕ್ಕೆ 5 ಸಾ. ಕೋ.ರೂ.
- ಕಳಸಾ ಬಂಡೂರಿ ನಾಲಾ ತಿರುವು ಯೋಜನೆಗೆ 1 ಸಾವಿರ ಕೋಟಿ ರೂ. ಮೀಸಲು
- 100 ಡಾ. ಬಿ. ಆರ್. ಅಂಬೇಡ್ಕರ್ ವಿದ್ಯಾರ್ಥಿ ನಿಲಯಗಳ ನಿರ್ಮಾಣ
- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 50 'ಕನಕದಾಸ' ವಿದ್ಯಾರ್ಥಿ ನಿಲಯ ನಿರ್ಮಾಣ
- ನವಲಗುಂದ, ರಾಣೇಬೆನ್ನೂರಿನಲ್ಲಿ ಜವಳಿ ಪಾರ್ಕ್
- ಪಡಿತರದಲ್ಲಿ 5 ಕೆಜಿ ಅಕ್ಕಿ ಜೊತೆಗೆ ಹೆಚ್ಚುವರಿ 1 ಕೆಜಿ ರಾಗಿ ಅಥವಾ ಜೋಳ ವಿತರಣೆ
- ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನ
- ಆಶಾ ಕಾರ್ಯಕರ್ತೆಯರ ಗೌರವ ಧನ ಏರಿಕೆ
- ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಕೊಲ್ಲೂರು, ತಿರುಪತಿ, ಮಂತ್ರಾಲಯ, ಮೇಲ್‌ಮರವತ್ತೂರು ಸೇರಿದಂತೆ ಇನ್ನಿತರೆ ಸ್ಥಳಗಳಿಗೆ ಪ್ಯಾಕೇಜ್ ಟ್ರಿಪ್ ಸೇವೆ
- ಪ್ರವಾಸಿ ಗೈಡ್‌ಗಳಿಗೆ 2 ಸಾವಿರ ರೂ. ಪ್ರೋತ್ಸಾಹ ಧನ




### ಯಶಸ್ವಿನಿ ಮರು ಜಾರಿ

ಬೆಂಗಳೂರು,ಮಾ.4 - ರೈತರ ಬಹು ದಿನಗಳ ಬೇಡಿಕೆಯಾದ ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ, ಮರು ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಈ ಯೋಜನೆಯಿಂದ ಗ್ರಾಮೀಣ ಭಾಗದ ರೈತರ ಕುಟುಂಬಗಳಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯಗಳು ಲಭಿಸಲಿದ್ದು, ರಾಜ್ಯ ಸರ್ಕಾರದಿಂದ 300 ಕೋಟಿ ರೂ.ಗಳನ್ನು ಒದಗಿಸುವುದಾಗಿ ಮುಖ್ಯಮಂತ್ರಿ ಬೊಮ್ಮಾಯಿ ಪ್ರಸ್ತಾಪಿಸಿದ್ದಾರೆ.

### ದಾವಣಗೆರೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕಾರ್ಯಸಾಧ್ಯತಾ ವರದಿ, ಪ್ರತ್ಯೇಕ ಹಾಲು ಒಕ್ಕೂಟ

ಬೆಂಗಳೂರು, ಮಾ.4 - ದಾವಣಗೆರೆಯಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ಕಾರ್ಯಸಾಧ್ಯತಾ ವರದಿ ತಯಾರಿಸುವುದು, ಶಿಮುಲ್‌ನಿಂದ ಪ್ರತ್ಯೇಕ ಗೊಳಿಸಿ ದಾವಣಗೆರೆ-ಚಿತ್ರದುರ್ಗ ಜಿಲ್ಲೆಗಳಿಗೆ ಪ್ರತ್ಯೇಕ ಹಾಲು ಒಕ್ಕೂಟ ನಿರ್ಮಾಣ ಹಾಗೂ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಸ್ಪಂದಿಸಲು ದಾವಣಗೆರೆಯಲ್ಲಿ ಎಸ್‌ಡಿಆರ್‌ಎಫ್ ಕಂಪನಿ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

### ಪೌರ ಕಾರ್ಮಿಕರಿಗೆ ಸಂಕಷ್ಟ ಭತ್ಯೆ

ಬೆಂಗಳೂರು, ಮಾ.4- ಪೌರ ಕಾರ್ಮಿಕರಿಗೆ ಮಾಸಿಕ 2000 ರೂ ಸಂಕಷ್ಟ ಭತ್ಯೆ ನೀಡಲು ಸರ್ಕಾರ ನಿರ್ಧರಿಸಿದೆ. ವಿಧಾನಸಭೆಯಲ್ಲಿಂದು 2022-23 ನೇ ಸಾಲಿನ ಆಯವ್ಯಯ ಮಂಡಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ವಿಷಯ ಪ್ರಕಟಿಸಿದರು. ಇದೇ ರೀತಿ ಆಶಾ ಕಾರ್ಯಕರ್ತೆಯರಿಗೆ, ಗ್ರಾಮ ಸಹಾಯಕರಿಗೆ, ಬಿಸಿಯೂಟ ತಯಾರಕರಿಗೆ ಮತ್ತು ಸಹಾಯಕರಿಗೆ ಒಂದು ಸಾವಿರ ರೂ ಹೆಚ್ಚುವರಿ ಗೌರವ ಧನವನ್ನು ನೀಡಲಾಗುವುದು ಎಂದರು.
ಅಂಗನವಾಡಿ ಕಾರ್ಯಕರ್ತೆಯರಿಗೆ ಸೇವಾನುಭವದ ಆಧಾರದಲ್ಲಿ ಈಗ ನೀಡುತ್ತಿರುವ ಗೌರವ ಧನದ ಪ್ರಮಾಣವನ್ನು ಒಂದರಿಂದ, ಒಂದೂವರೆ ಸಾವಿರ ರೂಪಾಯಿಗಳಷ್ಟು ಹೆಚ್ಚಳ ಮಾಡುವುದಾಗಿ ಪ್ರಕಟಿಸಿದರು.

### ಕಟ್ಟಡ ಕಾರ್ಮಿಕರಿಗೆ ಬಸ್ ಪಾಸ್

ಬೆಂಗಳೂರು,ಮಾ.4 - ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರಿಗೆ ರಿಯಾಯ್ತಿ ದರದಲ್ಲಿ ಬಸ್ ಪಾಸ್ ಒದಗಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ. 2022-23 ನೇ ಸಾಲಿನ ಆಯವ್ಯಯವನ್ನು ಮಂಡಿಸಿದ ಅವರು,ಕಾರ್ಮಿಕರ ಕ್ಷೇಮಾಭಿವೃದ್ಧಿ ತಮ್ಮ ಸರ್ಕಾರದ ಆದ್ಯತೆ ಎಂದರು. ರಾಜ್ಯದ 2.30 ಲಕ್ಷ ಕಟ್ಟಡ ಕಾರ್ಮಿಕರ ಶ್ರೇಯೋಭಿವೃದ್ಧಿಗೆ 2610 ಕೋಟಿ ರೂಪಾಯಿ ಒದಗಿಸುವುದಾಗಿ ಅವರು ತಿಳಿಸಿದರು. ಯೆಲ್ಲೋ ಬೋರ್ಡ್ ಚಾಲಕರ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾನಿಧಿ ಯೋಜನೆ,ಆರೋಗ್ಯ ಸೌಲಭ್ಯಕ್ಕೆ ವಿಶೇಷ ಯೋಜನೆ ರೂಪಿಸಲಾಗಿದೆ ಎಂದರು. ರಾಜ್ಯದ ಕಟ್ಟಡ ಕಾರ್ಮಿಕರಿಗಾಗಿ ನೂರು ಹೈಟೆಕ್ ಸಂಚಾರಿ ಕ್ಲಿನಿಕ್ ಗಳನ್ನು ಪ್ರಾರಂಭಿಸುವುದಾಗಿ ಅವರು ಘೋಷಿಸಿದರು.

### ಕೃಷಿ ಉಪಕರಣಗಳಿಗೆ 'ರೈತ ಶಕ್ತಿ'

#### ಎಕರೆಗೆ 250 ರೂ.ಗಳ ಡೀಸೆಲ್ ಸಹಾಯಧನ

ಬೆಂಗಳೂರು, ಮಾ.4 - ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ರೈತ ಸಮುದಾಯಕ್ಕೆ ಒಂದಷ್ಟು ಪರಿಹಾರ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೃಷಿ ಯಂತ್ರೋಪಕರಣಗಳ ಬಳಕೆಗೆ ಉತ್ತೇಜನ ನೀಡಿದ್ದಾರೆ.

ವಿಧಾನಸಭೆಯಲ್ಲಿಂದು 2022-23ನೇ ಸಾಲಿನ ಮುಂಗಡ ಪತ್ರದಲ್ಲಿ 'ರೈತ ಶಕ್ತಿ' ನೂತನ ಯೋಜನೆಯಡಿ ಕೃಷಿ ಯಂತ್ರೋಪಕರಣಗಳ ಬಳಕೆ ಉತ್ತೇಜನಕ್ಕೆ ಪ್ರತಿ ಎಕರೆಗೆ 250 ರೂ. ಗಳಂತೆ ಡೀಸೆಲ್ ಸಹಾಯಧನ ನೀಡಲು 600 ಕೋಟಿ ರೂ. ಅನುದಾನ ಘೋಷಿಸಿದ್ದಾರೆ.

ಕೆಪೆಕ್ ಮೂಲಕ ಕೃಷಿ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆ, ಮಾರಾಟ ಮತ್ತು ರಫ್ತು ಮಾಡಲು 50 ಕೋಟಿ ರೂ. ಹಂಚಿಕೆ ಮಾಡಿರುವ ಅವರು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಮಿನಿ ಆಹಾರ ಪಾರ್ಕ್ ಸ್ಥಾಪನೆ ಮಾಡಲಿದ್ದಾರೆ.

ಬಡ್ಡಿ ರಿಯಾಯಿತಿ ಯೋಜನೆಯಡಿ 3 ಲಕ್ಷ ಹೊಸ ರೈತರೂ ಸೇರಿದಂತೆ 33 ಲಕ್ಷ ರೈತರಿಗೆ 24,000 ಕೋಟಿ ರೂ. ಸಾಲ ವಿತರಣೆ ಗುರಿ ನೀಡಿದ್ದಾರೆ. ಗ್ರಾಮೀಣ ರೈತರಿಗೆ ಆರೋಗ್ಯ ಸೇವೆ ಒದಗಿಸಲು ಪರಿಷ್ಕೃತ ರೂಪದಲ್ಲಿ (2ನೇ ಪುಟಕ್ಕೆ)

### ಹಾವೇರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 20 ಕೋಟಿ ರೂ.

ಬೆಂಗಳೂರು, ಮಾ. 4- ಕನ್ನಡ ನಾಡು, ಸಂಸ್ಕೃತಿ ಬಿಂಬಿಸಲು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಾವೇರಿಯಲ್ಲಿ ಆಯೋಜಿಸಲು 20 ಕೋಟಿ ರೂ. ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಣಕಾಸು ಸಚಿವರೂ ಆದ ಸಿಎಂ ಬೊಮ್ಮಾಯಿ ಅವರು ಇಂದು ಮಂಡಿಸಿದ ಆಯವ್ಯಯದಲ್ಲಿ ಈ ವಿಷಯ ಪ್ರಸ್ತಾಪಿಸಿ ಹಾವೇರಿಯ ಸಾಹಿತ್ಯ ಸಮ್ಮೇಳನಕ್ಕೆ 20 ಕೋಟಿ ರೂ. ಒದಗಿಸಲಾಗುವುದು ಎಂದು ತಿಳಿಸಿದರು.

ಸಮಾಜ ಸುಧಾರಕರಾದ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ) ಅವರ ಜಯಂತಿಯನ್ನು ಪ್ರತಿ ವರ್ಷ ಮಾ.27ರಂದು ಸರ್ಕಾರದ ವತಿಯಿಂದ ಆಚರಿಸಲಾಗುವುದು ಎಂದು ತಿಳಿಸಿದರು.

ನಶಿಸಿ ಹೋಗುತ್ತಿರುವ ತಳ ಸಮುದಾಯದಲ್ಲಿರುವ ವಿಶಿಷ್ಟ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ಶಿಬಿರ ಆಯೋಜನೆ ಮಾಡಲು ನಿರ್ಧರಿಸಲಾಗಿದೆ. ಹಾವೇರಿ ಜಿಲ್ಲೆಯಲ್ಲಿ ಡಾ. ಮಹಾದೇವ ಬಣಕಾರ ಸಾಂಸ್ಕೃತಿಕ ಭವನ ನಿರ್ಮಾಣ, ಸಾಹಿತಿಗಳಾದ ಡಾ. ಸಿದ್ಧಲಿಂಗಯ್ಯ, ಚಿಮೂ, ಚಂಪಾ, ಕಣವಿ (2ನೇ ಪುಟಕ್ಕೆ)

# ನೆರವಿನ ನೆಪದಲ್ಲಿ ಎ.ಟಿ.ಎಂ. ವಂಚನೆ

## ಅಂತರ್‌ಜಿಲ್ಲಾ ವಂಚಕನ ಬಂಧನ, 8.58 ಲಕ್ಷ ರೂ. ವಶ: ಎಸ್ಪಿ

ದಾವಣಗೆರೆ, ಮಾ. 4 - ಎ.ಟಿ.ಎಂ.ನಿಂದ ಹಣ ಬಿಡಿಸಲು ಸಹಾಯ ಮಾಡುವ ನೆಪದಲ್ಲಿ ವೃದ್ಧರಿಗೆ ವಂಚನೆ ಮಾಡುತ್ತಿದ್ದ ಅಂತರ್‌ಜಿಲ್ಲಾ ವಂಚಕನೋರ್ವನನ್ನು ಪೊಲೀಸರು ಬಂಧಿಸಿದ್ದಾರೆ.

ಹಾವೇರಿ ಜಿಲ್ಲೆ ರಾಣೇಬೆನ್ನೂರಿನ ಯೋಗಾನಂದ್ (47) ಬಂಧಿತ ಆರೋಪಿ, ಈತನಿಂದ ಒಟ್ಟು 8,58,800 ರು. ಹಣವನ್ನು ಪೊಲೀಸರು ವಶಪಡಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಹಣ ಬಿಡಿಸಿಕೊಳ್ಳಲು ಎ.ಟಿ.ಎಂ.ಗೆ ಬರುತ್ತಿದ್ದ ವೃದ್ಧರನ್ನೇ ಗುರಿಯಾಗಿಸಿಕೊಂಡು ಅವರಿಗೆ ಸಹಾಯ ಮಾಡುವ ನೆಪದಲ್ಲಿ ಅವರ ಎ.ಟಿ.ಎಂ.ಗೆ ಹೋಲಿಕೆಯಾಗುವ ಮತ್ತೊಂದು ಎ.ಟಿ.ಎಂ. ಅವರಿಗೆ ನೀಡಿ, ವಂಚಿಸುತ್ತಿದ್ದ ಎಂದಿದ್ದಾರೆ.

ನಂತರ ವೃದ್ಧರ ಎಟಿಎಂ ನಿಂದ ಹಣ ಬಿಡಿಸಿಕೊಳ್ಳುತ್ತಿದ್ದ. ಆರೋಪಿಯಿಂದ 78 ಎ.ಟಿ.ಎಂ. ಕಾರ್ಡುಗಳನ್ನು ವಶಕ್ಕೆ



ಹಿಜಾಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ದಾವಣಗೆರೆ ಮತ್ತು ಹರಿಹರದ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದಿದ್ದ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ 39 ಆರೋಪಿಗಳನ್ನು ಬಂಧಿಸಲಾಗಿದೆ.

ಪಡೆಯಲಾಗಿದೆ ಎಂದು ತಿಳಿಸಿದರು.

ದಾವಣಗೆರೆ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ಹಿರಿಯೂರು, ತುಮಕೂರು, ಶಿಗ್ಗಾವಿ, ಹಿರೇಕೆರೂರು ಸೇರಿದಂತೆ ರಾಜ್ಯಾದ್ಯಂತ ವಿವಿಧೆಡೆ ಒಟ್ಟು 18 ಎಟಿಎಂ ಹಣ ವಂಚನೆ ಪ್ರಕರಣಗಳಲ್ಲಿ ಆರೋಪಿ ಭಾಗಿ (2ನೇ ಪುಟಕ್ಕೆ)

# ಅತಂತ್ರ ವಿದ್ಯಾರ್ಥಿಗಳ ನೆರವಿಗೆ ಪ್ರಧಾನಿ ಕಚೇರಿ ಸಂಪರ್ಕಿಸಿದ ತರಳಬಾಳು ಶ್ರೀ

ದಾವಣಗೆರೆ, ಮಾ. 4 - ಉಕ್ರೇನ್‌ನ ಖಾರ್ಕೀವ್ ಬಳಿ ಇರುವ ಪಿಸೊಚಿನ್ ನಗರದಲ್ಲಿರುವ ಸ್ಯಾನಾಟೊರಿ ರೊಸ್ಟದಲ್ಲಿ ಸಾವಿರಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಅತಂತ್ರರಾಗಿದ್ದಾರೆ.

ಕಳೆದ ಬುಧವಾರದಂದು ಸೂಚನೆಯೊಂದನ್ನು ನೀಡಿದ್ದ ಭಾರತದ ರಾಯಭಾರಿ ಕಚೇರಿ, ಖಾರ್ಕೀವ್‌ನಲ್ಲಿರುವ ವಿದ್ಯಾರ್ಥಿಗಳು ತಕ್ಷಣವೇ ಹೊರ ಬರಬೇಕು. ಹತ್ತಿರದ ನಗರಕ್ಕೆ ಕಾಲ್ನಡಿಗೆಯಲ್ಲಾದರೂ ತೆರಳಬೇಕು ಎಂದು ಹೇಳಿತ್ತು. ಪಿಸೊಚಿನ್, ಬಬಯೆ ಹಾಗೂ ಬೆಜ್ಲುಡೊವ್ಕ ನಗರಗಳಿಗೆ ತೆರಳುವಂತೆ ತಿಳಿಸಲಾಗಿತ್ತು.

ಅದರಂತೆ ಸಾವಿರ ವಿದ್ಯಾರ್ಥಿಗಳು ಪಿಸೊಚಿನ್‌ಗೆ ತಲುಪಿದ್ದಾರೆ. ಇವರಲ್ಲಿ ಸುಮಾರು 300 ವಿದ್ಯಾರ್ಥಿಗಳು ಬಂಕರ್‌ನಲ್ಲಿದ್ದಾರೆ. ವಿದ್ಯಾರ್ಥಿಗಳ ಜೀವಕ್ಕೆ ಬೆದರಿಕೆ ಇಲ್ಲವಾದರೂ, ಆಹಾರ ಹಾಗೂ ಕುಡಿಯಲು ನೀರು ಸಿಗದ ಪರಿಸ್ಥಿತಿ ಎದುರಾಗಿದೆ. ರಷ್ಯಾದ ಗಡಿಗೆ ಸಮೀಪವಾಗಿರುವ ಈ



ಪಿಸೊಚಿನ್‌ನಲ್ಲಿ ಅತಂತ್ರವಾದ ಸಾವಿರಾರು ವಿದ್ಯಾರ್ಥಿಗಳು, ಕುಡಿಯುವ ನೀರಿಗೂ ತತ್ತರಿಸುವ ಪರಿಸ್ಥಿತಿ

ನಗರ, ಕದನದಿಂದಾಗಿ ಅತ್ಯಂತ ಅಪಾಯಕಾರಿ ಪರಿಸ್ಥಿತಿ ಎದುರಿಸುತ್ತಿದೆ. ಖಾರ್ಕೀವ್‌ನಿಂದ ಸಾಕಷ್ಟು ವಿದ್ಯಾರ್ಥಿಗಳು ಹೊರ ಬರಲು ಸಾಧ್ಯವಾಗಿದೆ. ಆದರೆ, ಪಿಸೊಚಿನ್‌ನಲ್ಲಿ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ದೂರದ ಲೆವಿವ್ ನಗರಕ್ಕೆ ತಲುಪಿದರೆ, ಭಾರತಕ್ಕೆ ಬರುವುದು ಸುಲಭವಾಗಲಿದೆ. ಆದರೆ, (2ನೇ ಪುಟಕ್ಕೆ)

# ನಗರ ಪಾಲಿಕೆ ವಿರೋಧ ಪಕ್ಷದ ನಾಯಕರಾಗಿ ಗಡಿಗುಡಾಳ್ ಮಂಜುನಾಥ್



ದಾವಣಗೆರೆ, ಮಾ.4- ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕರಾಗಿ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ನೇಮಕಗೊಂಡಿದ್ದಾರೆ.

ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಸಮಿತಿ, ಪಾಲಿಕೆಯ ಕಾಂಗ್ರೆಸ್ ಸದಸ್ಯರ ಒಪ್ಪಿಗೆಯ ಮೇರೆಗೆ ಈ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಪಾಲಿಕೆಯ ವತಿಯಿಂದ ವಿರೋಧ ಪಕ್ಷದ ನಾಯಕನಿಗೆ ನೀಡುವ ಸೌಲಭ್ಯಗಳು ಹಾಗೂ ಮಾಹಿತಿಯನ್ನು ನೀಡುವಂತೆ ಮಂಜಪ್ಪ ಅವರು ಪಾಲಿಕೆ ಆಯುಕ್ತರಿಗೆ ತಿಳಿಸಿದ್ದಾರೆ.

# ದನವಿನ ಓಣಿಯಲ್ಲಿನ ಅನಧಿಕೃತ ಗುಡಿಸಲುಗಳ ತೆರವು

## ಕಾರ್ಯಾಚರಣೆಗೆ ಅಡ್ಡಿಪಡಿಸಿದ ಆರೋಪದಡಿ ಒಂಭತ್ತು ಮಂದಿ ಪೊಲೀಸ್ ವಶಕ್ಕೆ



ದಾವಣಗೆರೆ, ಮಾ.4- ಇಲ್ಲಿಗೆ ಸಮೀಪದ ಆವರಗೆರೆ ಬಳಿಯ ದನವಿನ ಓಣಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಗುಡಿಸಲು ಹಾಕಿಕೊಂಡಿದ್ದ ಹಿನ್ನೆಲೆಯಲ್ಲಿ 400ಕ್ಕೂ ಹೆಚ್ಚು ಗುಡಿಸಲುಗಳನ್ನು ಜಿಲ್ಲಾಡಳಿತ ಗುರುವಾರ ರಾತ್ರಿ ತೆರವುಗೊಳಿಸಿತು.

ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಗಿರೀಶ್ ಹಾಗೂ ನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಹಾಗೂ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ನೇತೃತ್ವದಲ್ಲಿ ಹತ್ತಾರು ಜೆಸಿಬಿ ಯಂತ್ರಗಳೊಂದಿಗೆ ಹಾಗೂ ಇನ್ನೂರಕ್ಕೂ ಹೆಚ್ಚು ಪೊಲೀಸ್ ಭದ್ರತೆಯಲ್ಲಿ ರಾತ್ರಿ ವೇಳೆ ತೆರವು ಕಾರ್ಯಾಚರಣೆಗೆ ಮುಂದಾದರು. ಈ ವೇಳೆ ಅಲ್ಲಿನ ಗುಡಿಸಲು ವಾಸಿಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿ ಅಡ್ಡಿಪಡಿಸಿದ್ದಾರೆ. ಆದರೂ ಅಧಿಕಾರಿಗಳು ತೆರವುಗೊಳಿಸಿದ್ದಾರೆ. ತೆರವು ವೇಳೆ ಅಡ್ಡಿಪಡಿಸಿದ ಒಂಭತ್ತು ಜನರನ್ನು ವಶಕ್ಕೆ ಪಡೆದ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಜೆಸಿಬಿ ವಾಹನ ಚಾಲಕನ ಮೇಲೆ ಸ್ಥಳೀಯರು ಹಲ್ಲೆ ಮಾಡಿದ್ದಾರೆ ಎಂದು ಅಧಿಕಾರಿಗಳು ಆರೋಪಿಸಿದ್ದಾರೆನ್ನಲಾಗಿದೆ.

**ಮತ್ತೆ ಗುಡಿಸಲು ಹಾಕುವ ಪಟ್ಟು:** ಮತ್ತೆ ಅಲ್ಲಿ ಗುಡಿಸಲು ಹಾಕುತ್ತೇವೆ. ನಮಗೆ ಮನೆಗಳಿಲ್ಲ. ಬಾಡಿಗೆ ಕಟ್ಟಿ ಬದುಕುವಷ್ಟು ಶಕ್ತಿ ಇಲ್ಲ. ಮತ್ತೆ ಅಲ್ಲಿ ಗುಡಿಸಲು ಹಾಕುತ್ತೇವೆ ಎಂದು ಸ್ಥಳೀಯರು ನಗರ ಪಾಲಿಕೆ ಕಚೇರಿಗೆ ಆಗಮಿಸಿ ಪ್ರತಿಭಟನಾ ಧರಣಿ ಮುಖೇನ ಬಿಗಿ ಪಟ್ಟು ಹಿಡಿದಿದ್ದರು.

ಮಧ್ಯರಾತ್ರಿ ಸಮಯದಲ್ಲಿ ನಗರ ಪಾಲಿಕೆ ಅಧಿಕಾರಿಗಳು ದನವಿನ ಓಣಿಗೆ ಜೆಸಿಬಿ ಯಂತ್ರಗಳ ಸಮೇತ ಬಂದು ತೆರವುಗೊಳಿಸಿದರು. ಪಾಲಿಕೆಯ ಈ ಕಾರ್ಯದಿಂದಾಗಿ ಜನರ ಬದುಕು ಅತಂತ್ರವಾಗಿದೆ. ಅವರಿಗೆ ಇರಲು ಮನೆ ಇಲ್ಲ, ಬಾಡಿಗೆ ಕಟ್ಟಿ ಬದುಕುವಷ್ಟು ಶಕ್ತಿ ಇಲ್ಲ. ಪಾಲಿಕೆ ಅಧಿಕಾರಿಗಳು ಒಂಭತ್ತು ಜನರ ಮೇಲೆ ದೂರು ಕೊಟ್ಟಿದ್ದಾರೆ. ಈ ದೂರನ್ನು ವಾಪಸ್ ಪಡೆಯಬೇಕು ಎಂದು ಮುಖಂಡ ಹೆಚ್. ಮಲ್ಲೇಶ್ ಆಗ್ರಹಿಸಿದರು.

**ಎರಡು ಬಾರಿ ಎಚ್ಚರಿಕೆ :** ದನವಿನ ಓಣಿಯಲ್ಲಿನ ಅನಧಿಕೃತ ಗುಡಿಸಲುಗಳ ತೆರವಿಗೆ ಮೌಖಿಕವಾಗಿ ಸೂಚನೆ ಸೇರಿದಂತೆ ಎರಡು ಬಾರಿ ಎಚ್ಚರಿಕೆ ನೀಡಿದ್ದರೂ ಗುಡಿಸಲುಗಳನ್ನು ತೆರವುಗೊಳಿಸಿರಲಿಲ್ಲ. (2ನೇ ಪುಟಕ್ಕೆ)

# ದುಗ್ಗಮ್ಮನ ಜಾತ್ರೆ: ಪ್ರಾಣಿ ಬಲಿ ನಿಷೇಧ

## ದೂರು ಬಂದರೆ ತಪ್ಪಿತಸ್ಥರು ಹಾಗೂ ಕಮಿಟಿ ವಿರುದ್ಧ ಕ್ರಮ: ಡಿಸಿ

ದಾವಣಗೆರೆ, ಮಾ.4- ದೇವರ ಕೃಪೆಗೆ ಪಾತ್ರರಾಗುವ ನಾವು ಯಾವುದೇ ರೀತಿಯ ಪ್ರಾಣಿ ಹಿಂಸೆ ಮಾಡಬಾರದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು

ಶುಕ್ರವಾರ ನಗರ ದೇವತೆ ಶ್ರೀ ದುರ್ಗಾಂಬಿಕ ಜಾತ್ರಾ ಪ್ರಯುಕ್ತ ನಡೆದ ಸಭೆಯಲ್ಲಿ ಭಾಗವಹಿಸಿದ್ದ ದೇವಸ್ಥಾನದ ಧರ್ಮದರ್ಶಿಗಳು, ಟ್ರಸ್ಟ್ ಸದಸ್ಯರು ಹಾಗೂ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಮಾ.13 ರಿಂದ 16ರ ವರೆಗೆ ನಡೆಯುವ ಜಾತ್ರೆಯಲ್ಲಿ ಯಾವುದೇ ಪ್ರಾಣಿ ಬಲಿ ಆಗಬಾರದು. ಪ್ರಾಣಿ ಹಿಂಸೆ ಮಹಾಪಾಪ ಎಂದು ನಂಬಿಕೊಂಡು ಬಂದಿರುವವರು ನಾವು, ದೇವರು ಭಕ್ತಿಯನ್ನು ಬಯಸುತ್ತಾನೆಯೇ ಹೊರತು ಹಿಂಸೆಯನ್ನಲ್ಲ. ನಮ್ಮ ಕಾನೂನು ಕೂಡ ಅದನ್ನೇ ಹೇಳುತ್ತದೆ, ಹಾಗಾಗಿ ನ್ಯಾಯಾಲಯದ



ಆದೇಶಕ್ಕೆ ಒಳಪಟ್ಟು ಯಾವುದೇ ರೀತಿಯ ಪ್ರಾಣಿ ಹಿಂಸೆ ಮಾಡದೆ ಕೇವಲ ಸಿರೆಂಜ್ ಮೂಲಕ ಕೋಣದ ರಕ್ತವನ್ನು ತೆಗೆದು ತಾಯಿಗೆ ಅರ್ಪಿಸಿ ಜಾತ್ರೆ ಆಚರಿಸೋಣವೆಂದರು.

ಇದರೊಂದಿಗೆ ನಿಷೇಧಕ್ಕೆ ಒಳಗಾಗಿರುವ ಬೆತ್ತಲೆ ದೇಹದ ಮೇಲಿನ ಬೇವಿನುಡಿಗೆ, ಮುತ್ತು ಕಟ್ಟುವುದು ಮುಂತಾದ ಕಾನೂನು ಪ್ರಕಾರ ನಿಷೇಧಕ್ಕೊಳಗಾಗಿರುವ ಆಚರಣೆಗಳನ್ನು ಮಾಡದೆ ಕೈಯಲ್ಲಿ ಬೇವಿನ ಎಸಳನ್ನು ಹಿಡಿದು ಹರಕೆ ತೀರಿಸೋಣ. ಒಂದು ವೇಳೆ ದೂರುಗಳು ಬಂದರೆ ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಹಾಗೂ ದೇವಸ್ಥಾನದ ಕಮಿಟಿಯವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದರು.

ಕೋವಿಡ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಜಾತ್ರೆಯನ್ನು ಒಂದು ರೀತಿ ದಾವಣಗೆರೆ ಹಬ್ಬ ಎಂಬಂತೆ ಆಚರಿಸಲು ದೇವಸ್ಥಾನಕ್ಕೆ ಬರುವ ಭಕ್ತರಿಗೆ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಿಕೊಡ ಬೇಕೆಂದರು. ಪ್ಲಾ ಸ್ಟಿ ಕ್ (2ನೇ ಪುಟಕ್ಕೆ)

# ರಾಜನಹಳ್ಳಿ ಶ್ರೀಗಳ ಧರಣಿ ಸತ್ಯಾಗ್ರಹ ಬೆಂಬಲಿಸಿ ಹರಿಹರದಲ್ಲಿ 8ರಂದು ಪ್ರತಿಭಟನೆ



ಮಲೇಬೆನ್ನೂರು, ಮಾ.4- ವಾಲ್ಮೀಕಿ ಶ್ರೀಗಳ ಧರಣಿ ಸತ್ಯಾಗ್ರಹ ಬೆಂಬಲಿಸಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ) ಅನುಷ್ಠಾನಕ್ಕೆ ಒತ್ತಾಯಿಸಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಬೆಂಗಳೂರಿನಲ್ಲಿ ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಬೆಂಬಲಿಸಿ ಹರಿಹರದಲ್ಲಿ ಇದೇ ದಿನಾಂಕ 8ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಾ. ಗ್ರಾ. ನಾಯಕ ಸಮಾಜದ ಅಧ್ಯಕ್ಷ ಜಿಗಳಿಯ ಕೆ.ಆರ್ ರಂಗಪ್ಪ ತಿಳಿಸಿದ್ದಾರೆ.

ಶ್ರೀಗಳು ಕಳೆದ 22 ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ ಸರ್ಕಾರದಿಂದ ಯಾವುದೇ ಸ್ಪಂದನೆ ಸಿಗದ ಕಾರಣ, ವಾಲ್ಮೀಕಿ ಗುರುಪೀಠದಲ್ಲಿ ಬುಧವಾರ ಕರೆದಿದ್ದ ಸಮಾಜದ ಸಭೆಯಲ್ಲಿ ಸುದೀರ್ಘ ಚರ್ಚೆ ನಂತರ ಪ್ರತಿಭಟನೆ ಮಾಡುವ ಬಗ್ಗೆ ನಿರ್ಧರಿಸಲಾಯಿತು.

ಎಸ್ಸಿ-ಎಸ್ಟಿ ಜನ ಸೇರಿ ಹರಿಹರ ನಗರದಲ್ಲಿ ಮಾರ್ಚ್ 8 ರಂದು ಪ್ರತಿಭಟನೆ ನಡೆಸಿ, ನಂತರ ಒಂದು ದಿನ ಬೆಂಗಳೂರಿಗೆ ತೆರಳಿ ಶ್ರೀಗಳಿಗೆ ಬೆಂಬಲ ನೀಡಲು ಸಭೆ ತೀರ್ಮಾನಿಸಿದೆ ಎಂದು ಸಮಾಜದ ಹರಿಹರ ನಗರ ಘಟಕದ ಅಧ್ಯಕ್ಷ ಕೆ. ಬಿ. ಮಂಜುನಾಥ್ ಹೇಳಿದರು.

ಸಮಾಜದ ಮುಖಂಡರಾದ ಜಿಗಳಿಯ ಜಿ. ಆನಂದಪ್ಪ, ಹೆಚ್. ಟಿ.ರಂಗನಾಥ್, ಶಿಕ್ಷಕ ಜಿ.ಆರ್. ನಾಗರಾಜ್, ದೇವರಬೆಳಕೆರೆ ಮಹೇಶ್ವರಪ್ಪ, ಕೊಕ್ಕನೂರು ಸೋಮಶೇಖರ್, ಹರಿಹರದ ಹಂಚಿನಮನೆ ದೇವೇಂದ್ರಪ್ಪ, ಮಕರಿ ಪಾಲಾಕ್ಷಪ್ಪ, ಪಾರ್ವತಿ, ಬಾವಿಕಟ್ಟಿ ಕರಿಬಸಪ್ಪ, ರಾಜು, ಮೆಣಸಿನಹಾಳ್ ಗಂಗಾಧರ್, ಭೀಮಣ್ಣ, ಕೆ. ಬೇವಿನಹಳ್ಳಿಯ ನಾಗೇಂದ್ರಪ್ಪ, ರಾಜನಹಳ್ಳಿಯ ಭೀಮಣ್ಣ, ಶಿಕ್ಷಕ ವಾಸನದ ಮಹಾಂತೇಶ್, ಶಿಕ್ಷಕ ಭಾನುವಳ್ಳಿ ಮಾರುತಿ, ಭಾನುವಳ್ಳಿಯ ಟಿ.ಆರ್.ಮಹೇಶ್ವರಪ್ಪ, ಧೂಳೆಹೊಳೆ ಅಣ್ಣಪ್ಪ, ರಾಮತೀರ್ಥ ನಾಗರಾಜ್, ಕೆ.ಎನ್. ಹಳ್ಳಿ ಲೋಕೇಶ್, ಪರಶುರಾಮ್, ಜಿಗಳಿಯ ಬೆಣ್ಣೇರ ನಂದ್ಯಪ್ಪ, ಪತ್ರಕರ್ತ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.

# ಸಮುದಾಯಗಳನ್ನು ಸರಿದೂಗಿಸುವ ಬಜೆಟ್

**(1ನೇ ಪುಟದಿಂದ)** ಭತ್ಯೆ ಏರಿಕೆ, ಪ್ರವಾಸಿ ಗೈಡ್‌ಗಳಿಗೆ 2000 ರೂ. ಪ್ರೋತ್ಸಾಹ ಧನ ಪ್ರಸ್ತಾಪಿಸಲಾಗಿದೆ.

ರಾಜ್ಯದ ಸ್ವಂತ ತೆರಿಗೆಗಳ ಮೂಲಕ 1,31,883 ಕೋಟಿ ರೂಪಾಯಿ, ಸಾಲಗಳ ಮೂಲಕ 72 ಸಾವಿರ ಕೋಟಿ ರೂಪಾಯಿ, ತೆರಿಗೆಯೇತರ ರಾಜಸ್ವದಿಂದ 10,941 ಕೋಟಿ ರೂಪಾಯಿ, ಕೇಂದ್ರ ತೆರಿಗೆಯ ಪಾಲಿನಿಂದ 29,783 ಕೋಟಿ ರೂಪಾಯಿ, ಕೇಂದ್ರದ ಸಹಾಯಾನುದಾನದ ರೂಪದಲ್ಲಿ 17,281 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವುದು ಬಜೆಟ್ ಗುರಿ ಎಂದು ಮುಖ್ಯಮಂತ್ರಿಗಳು ಹೇಳಿದರು.

ರಾಜ್ಯದ ತೆರಿಗೆಗಳ ಪೈಕಿ ವಾಣಿಜ್ಯ ತೆರಿಗೆಗಳಿಂದ 77,010 ಕೋಟಿ ರೂಪಾಯಿ, ಅಬಕಾರಿ ಬಾಬ್ತಿನಲ್ಲಿ 29 ಸಾವಿರ ಕೋಟಿ ರೂಪಾಯಿ, ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಮೂಲಕ 15 ಸಾವಿರ ಕೋಟಿ ರೂಪಾಯಿ, ಮೋಟಾರು ವಾಹನ ತೆರಿಗೆ ಬಾಬ್ತಿನಲ್ಲಿ 8007 ಕೋಟಿ ರೂಪಾಯಿ ಇತರೆ ಬಾಬ್ತುಗಳಿಂದ 2866 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗುವುದು ಎಂದು ಹೇಳಿದರು.

ಶಿಕ್ಷಣಕ್ಕೆ 31980 ಕೋಟಿ ರೂಪಾಯಿ, ಜಲ ಸಂಪನ್ಮೂಲಕ್ಕೆ 20601 ಕೋಟಿ ರೂಪಾಯಿ, ಗ್ರಾಮೀಣಾಭಿವೃದ್ಧಿಗೆ 17325 ಕೋಟಿ ರೂಪಾಯಿ, ಕಂದಾಯಕ್ಕೆ 14388 ಕೋಟಿ ರೂಪಾಯಿ, ಆರೋಗ್ಯಕ್ಕೆ 13982 ಕೋಟಿ ರೂಪಾಯಿ, ಇಂಧನಕ್ಕೆ 12655 ಕೋಟಿ ರೂಪಾಯಿ ನೀಡಲಾಗುವುದು.

ಸಾರಿಗೆಗೆ 11272 ಕೋಟಿ ರೂ., ಲೋಕೋಪಯೋಗಿಗೆ 10447 ಕೋಟಿ ರೂ., ಸಮಾಜ ಕಲ್ಯಾಣಕ್ಕೆ 9380 ಕೋಟಿ ರೂ., ಕೃಷಿ ಮತ್ತು ತೋಟಗಾರಿಕೆಗೆ 8457 ಕೋಟಿ ರೂ., ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ 4713 ಕೋಟಿ ರೂ., ವಸತಿಗೆ 3594 ಕೋಟಿ ರೂ. ಮತ್ತು ಆಹಾರ ಮತ್ತು ನಾಗರಿಕ ಸರಬರಾಜು ಬಾಬ್ತಿಗೆ 2988 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದು ನುಡಿದರು.

ತಮ್ಮ ಬಜೆಟ್ ಗೆ ರಾಜ್ಯ ತೆರಿಗೆ ಬಾಬ್ತಿನಿಂದ ಶೇ. 50 ರಷ್ಟು ಆದಾಯ ಬಂದರೆ, ಸಾಲದ ಮೂಲಕ ಶೇ. 27 ರಷ್ಟು ಹಣ ಬರಲಿದೆ. ಉಳಿದಂತೆ ಕೇಂದ್ರದ ತೆರಿಗೆ ಪಾಲಿನಿಂದ ಶೇ. 11 ರಷ್ಟು, ಕೇಂದ್ರದ ಸಹಾಯಾನುದಾನದಿಂದ ಶೇ.4 ರಷ್ಟು, ರಾಜ್ಯ ತೆರಿಗೆಯೇತರ ರಾಜಸ್ವದಿಂದ ಶೇ. 4 ರಷ್ಟು, ಸಾರ್ವಜನಿಕ ಲೆಕ್ಕದಿಂದ ಶೇ. 2 ರಷ್ಟು ಆದಾಯ ಬರಲಿದೆ ಎಂದು ವಿವರಿಸಿದರು.

ಸಾಲ ಮರುಪಾವತಿಗಾಗಿ ತಮ್ಮ ಸರ್ಕಾರ 14,179 ಕೋಟಿ ರೂಪಾಯಿಗಳನ್ನು ಒದಗಿಸಲಿದೆ ಎಂದು ಇದೇ ಸಂದರ್ಭದಲ್ಲಿ ಅವರು ಹೇಳಿದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಆಹಾರ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು ಎಂದ ಅವರು, ಬಡ್ಡಿ ರಿಯಾಯಿತಿ ಯೋಜನೆಯಡಿ ಮೂರು ಲಕ್ಷ ಹೊಸ ರೈತರು ಸೇರಿದಂತೆ ಒಟ್ಟು 33 ಲಕ್ಷ ರೈತರಿಗೆ 24000 ಕೋಟಿ ರೂ. ಸಾಲ ನೀಡಲಾಗುವುದು ಎಂದರು.

ಏಪ್ರಿಲ್ ಒಂದರಿಂದ ಪಡಿತರ ಚೀಟಿದಾರರಿಗೆ ಈಗಾಗಲೇ ಒದಗಿಸಲಾಗುತ್ತಿರುವ ಐದು ಕೆಜಿ ಅಕ್ಕಿಯ ಜತೆ ಇನ್ನೂ ಒಂದು ಕೆಜಿ ರಾಗಿ ಮತ್ತು ಜೋಳವನ್ನು ಒದಗಿಸಲಾಗುವುದು ಎಂದ ಮುಖ್ಯಮಂತ್ರಿಗಳು, ಈ ಯೋಜನೆಯ ಲಾಭ 4.34 ಕೋಟಿ ಫಲಾನುಭವಿಗಳಿಗೆ ಲಭ್ಯವಾಗಲಿದ್ದು ಇದಕ್ಕಾಗಿ 1400 ರೂ ವೆಚ್ಚವಾಗಲಿದೆ ಎಂದರು.

ಹೀಗೆ ರಾಜ್ಯದ ಸರ್ವರನ್ನೂ ತಲುಪುವ ಮತ್ತು ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದು ತಮ್ಮ ಬಜೆಟ್ ನ ಗುರಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮರ್ಥಿಸಿಕೊಂಡರು.

## ಕೃಷಿ ಉಪಕರಣಗಳಿಗೆ 'ರೈತ ಶಕ್ತಿ'

**(1ನೇ ಪುಟದಿಂದ)** ಯಶಸ್ವಿನಿ ಯೋಜನೆ ಮರು ಜಾರಿ. ರಾಜ್ಯ ಸರ್ಕಾರದಿಂದ 300 ಕೋಟಿ ರೂ. ಅನುದಾನ ನೀಡಿದ್ದಾರೆ.

57 ತಾಲ್ಲೂಕುಗಳಲ್ಲಿ 642 ಕೋಟಿ ರೂ. ವೆಚ್ಚದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ-2.0 ಜಾರಿ.

ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪ್ರತಿ ಟನ್ ದ್ವಿತಳಿ ರೇಷ್ಮೆಗೂಡಿಗೆ 10 ಸಾವಿರ ರೂ. ಪ್ರೋತ್ಸಾಹ ಧನ, ದ್ವಿತಳಿ ಮೊಟ್ಟೆ ಉತ್ಪಾದಿಸಿ ಶೈತ್ಯೀಕರಿಸಲು ಮದ್ದೂರು, ರಾಣೇಬೆನ್ನೂರು ಮತ್ತು ದೇವನಹಳ್ಳಿಯಲ್ಲಿ 15 ಕೋಟಿ ರೂ.ಗಳ ವೆಚ್ಚದಲ್ಲಿ ಶೈತ್ಯಾಗಾರ ನಿರ್ಮಾಣ.

ದ್ವಿತಳಿ ಬಿತ್ತನೆ ಗೂಡಿಗೆ ಪ್ರತಿ ಕೆಜಿಗೆ 50 ರೂ. ಪ್ರೋತ್ಸಾಹ ಧನ ಹೆಚ್ಚಳ; ರೇಷ್ಮೆ ನೂಲು ಬಿಚ್ಚಣಿಕೆದಾರರಿಗೆ ಪ್ರೋತ್ಸಾಹ ಧನ.

ಹಾಲು ಉತ್ಪಾದಕರಿಗೆ ಸಾಲ ಸೌಲಭ್ಯ ನೀಡಲು ರಾಜ್ಯದಲ್ಲಿ ಮೊದಲ ಬಾರಿಗೆ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ. ರಾಜ್ಯ ಸರ್ಕಾರದಿಂದ 100 ಕೋಟಿ ರೂ. ಷೇರು ಬಂಡವಾಳ.

ಗೋಶಾಲೆಗಳಲ್ಲಿನ ಗೋವುಗಳ ದತ್ತು ಪ್ರೋತ್ಸಾಹಕ್ಕೆ ರಾಜ್ಯದಲ್ಲಿ ಮೊದಲ ಬಾರಿಗೆ ಪುಣ್ಯಕೋಟಿ ದತ್ತು ಯೋಜನೆಗೆ ಚಾಲನೆ. ಹಾವೇರಿಯಲ್ಲಿ ಮೆಗಾ ಡೈರಿ ಸ್ಥಾಪನೆ; ಶಿವಮೊಗ್ಗ, ದಾವಣಗೆರೆ-ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರತ್ಯೇಕ ಹಾಲು ಒಕ್ಕೂಟ ಸ್ಥಾಪನೆಯ ಪ್ರಸ್ತಾವನೆ ಮಂಡಿಸಿದ್ದಾರೆ.

ಆಕಸ್ಮಿಕ ಮರಣ ಹೊಂದುವ ಕುರಿ/ ಮೇಕೆ ಸಾಕಾಣಿಕೆದಾರರು/ ವಲಸೆ ಕುರಿಗಾರರ ಕುಟುಂಬಕ್ಕೆ 5 ಲಕ್ಷ ರೂ. ವಿಮಾ ಸೌಲಭ್ಯ ಕಲ್ಪಿಸಿದ್ದಾರೆ.

## ಹಾವೇರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 20 ಕೋಟಿ ರೂ.

**(1ನೇ ಪುಟದಿಂದ)** ಅವರ ಅಮೂಲ್ಯ ಸಾಹಿತ್ಯಗಳನ್ನು ಉಳಿಸಲು ವಿಶೇಷ ಯೋಜನೆ. ಮಂಗಳೂರು ವಿವಿಯಲ್ಲಿ ಅರೆ ಭಾಷಾ ಸಂಶೋಧನಾ ಕೇಂದ್ರಗಳನ್ನು, ಗೋವಾದಲ್ಲಿ ಕನ್ನಡ ಭವನ ನಿರ್ಮಾಣ, ಕಾಸರಗೋಡಿನಲ್ಲಿ ಕಯ್ಯಾರ ಕಿಂಞಣ್ಣ ರೈ ಅವರ ಹೆಸರಿನಲ್ಲಿ, ಜಯದೇವಿ ತಾಯಿ ಲಿಗಾಡೆ ಅವರ ಹೆಸರಿನಲ್ಲಿ ಭವನ ನಿರ್ಮಾಣ ಮಾಡಲಾಗುವುದು ಎಂದರು.

## ಬಜೆಟ್, ಸಾರ್ವಜನಿಕರ ಮೂಗಿಗೆ ತುಪ್ಪ ಸವರುವ ಕೆಲಸ





ಹರಪನಹಳ್ಳಿ, ಮಾ.4- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿರುವ ಪ್ರಥಮ ಬಜೆಟ್ ಅತ್ಯಂತ ನಿರಾಶಾದಾಯಕವಾಗಿದೆ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ಪಿ.ಲತಾ ಮಲ್ಲಿಕಾರ್ಜುನ್ ಅಭಿಪ್ರಾಯ ಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಬಜೆಟ್‌ನಲ್ಲಿ ಉದ್ಯೋಗ ಸೃಷ್ಠಿಗೆ ಯಾವುದೇ ಕ್ರಮ ವಹಿಸಿಲ್ಲ. ಪರಿಶಿಷ್ಟ ಜಾತಿ, ಜನಾಂಗದವರ ಅಭಿವೃದ್ಧಿಗೆ ಪೂರಕ ಅಂಶಗಳಿಲ್ಲ. ಕೇವಲ ಆಯವ್ಯಯ ಬಿಟ್ಟರೆ ರಾಜ್ಯದ ಸಮಗ್ರ ಆರ್ಥಿಕ ಅಭಿವೃದ್ಧಿಯನ್ನು ನಿರ್ಲಕ್ಷ ಮಾಡಲಾಗಿದೆ. ಬಜೆಟ್ ಸಂಪೂರ್ಣವಾಗಿ ರೈತರ, ವಿದ್ಯಾರ್ಥಿಗಳ, ಬಡವರ ವಿರೋಧಿ ಬಜೆಟ್ ಎಂದು ಅಸಮಾಧಾನ ವ್ಯಕ್ತ ಪಡಿಸಿದ್ದಾರೆ.

ಬಜೆಟ್ ಕುರಿತು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್ ಪ್ರತಿಕ್ರಿಯೆ ನೀಡಿ, ಮುಖ್ಯಮಂತ್ರಿಗಳು ಮಂಡಿಸಿರುವ 2022-23 ನೇ ಸಾಲಿನ ಬಜೆಟ್ ನಿರಾಶಾದಾಯಕವಾಗಿದೆ.

ಆರ್ಥಿಕ ವರ್ಷದ ಬಜೆಟ್‌ನಲ್ಲಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಒತ್ತು ನೀಡಿಲ್ಲ.

ಸುಮಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿರುವ ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಲ್ಲ ಮತ್ತು ಅವರ ಮಾಸಿಕ ಗೌರವ ಧನ ಸಹ ಹೆಚ್ಚಳ ಮಾಡಿಲ್ಲ. ಒಟ್ಟಾರೆ ಈ ಬಜೆಟ್ ಕೇವಲ ಚುನಾವಣೆ ದೃಷ್ಟಿಕೋನದಿಂದ ಸಾರ್ವಜನಿಕರ ಮೂಗಿಗೆ ತುಪ್ಪ ಸವರುವ ಕೆಲಸ ಆಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

## ಬಜೆಟ್ ರಾಜ್ಯದ ಅಭಿವೃದ್ಧಿಗೆ ಪೂರಕ



ಹರಪನಹಳ್ಳಿ, ಮಾ.4- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿರುವ ಪ್ರಥಮ ಬಜೆಟ್ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ವಿಜಯನಗರ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸುವರ್ಣ ಆರುಂಡಿ ಹಾಗೂ ವಿಜಯನಗರ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಎನ್. ಕೊಟ್ರೇಶಪ್ಪ ಬಾಗಳಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದ ಅಭಿವೃದ್ಧಿಗೆ ಬೊಮ್ಮಾಯಿಯವರು 6 ಅಂಶಗಳ ಸೂತ್ರ ಪರಿಚಯಿಸಿದ್ದು, ಕೃಷಿ ಮತ್ತು ಪೂರಕ ವಲಯಗಳಿಗೆ ಉತ್ತೇಜನ ನೀಡಲಾಗಿದೆ. ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿಗೆ 68.479 ಕೋಟಿ ನಿಗದಿ ಪಡಿಸಲಾಗಿದೆ.

ಹಾಲು ಉತ್ಪಾದಕರಿಗೆ ಸಾಲ ಸೌಲಭ್ಯ ನೀಡಲು ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ, ಯಶಸ್ವಿನಿ ಯೋಜನೆ ಮರು ಜಾರಿ, 500 ಕೋಟಿ ರೂ. ವೆಚ್ಚದ ರೈತ ಶಕ್ತಿ ಯೋಜನೆ ಘೋಷಣೆ, ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮಾರ್ಗಸೂಚಿಯಡಿ ವಿನೂತನ ಪಠ್ಯಕ್ರಮ ರಚನೆಗೆ ಅವಕಾಶ ನೀಡಿದ್ದಾರೆ.

ವಿದೇಶಿ ಸಹಭಾಗಿತ್ವದಡಿಯಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಉನ್ನತೀಕರಣ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮಾರ್ಗ ಸೂಚಿಯಡಿ ವಿನೂತನ ಪಠ್ಯಕ್ರಮ ರಚನೆಗೆ ಒತ್ತು ನೀಡಲಾಗಿದೆ. ಹೋಬಳಿ ಮಟ್ಟದಲ್ಲಿ ಮೂಲಭೂತ ಸೌಕರ್ಯವಿರುವ ಮಾದರಿ ಶಾಲೆಗಳ ಉನ್ನತೀಕರಣಕ್ಕೆ ಆದ್ಯತೆ. ಮಹಿಳೆಯರ ಸಬಲೀಕರಣ ಹಾಗೂ ಕ್ಷೇಮಾಭಿವೃದ್ದಿಗೆ 43.188 ಕೋಟಿ ರೂ. ನಿಗದಿಪಡಿಸಿದ್ದಾರೆ. ಮಕ್ಕಳ ಅಭ್ಯುದಯಕ್ಕೆ 40.944 ಕೋಟಿ ರೂ.ಮೀಸಲಿಡಲಾಗಿದೆ ಎಂದರು.

## ದುಗ್ಗಮ್ಮನ ಜಾತ್ರೆ: ಪ್ರಾಣಿ ಬಲಿ ನಿಷೇಧ

**(1ನೇ ಪುಟದಿಂದ)** ಬ್ಯಾನರ್ ಮತ್ತು ಪೋಸ್ಟರ್ ಅಳವಡಿಸುವುದನ್ನು ನಿಷೇಧ ಮಾಡಲಾಗಿದ್ದು, ಪ್ಲಾಸ್ಟಿಕ್ ಬ್ಯಾನರ್ ಅಳವಡಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿ, ಜಾತ್ರೆಯು ಯಶಸ್ವಿಯಾಗಲು ಎಲ್ಲರ ಸಹಕಾರ ಅಗತ್ಯ. ಪ್ರಾಣಿ ಬಲಿ ನೀಡುವ ವರದಿಗಳು ಬಂದಲ್ಲಿ ಸಾಕ್ಷಿಗಳು ದೊರೆತರೆ ಅಂತಹವರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು. ನಗರದಾದ್ಯಂತ ಸಿಸಿಟಿವಿ ಅಳವಡಿಸಲು ವ್ಯವಸ್ಥೆ ಮಾಡಲಾಗಿದೆ ಎಂದರು.

ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ಮಾತನಾಡಿ, ಪ್ರತಿಬಾರಿಯಂತೆ ಈ ಬಾರಿಯೂ ಜಿಲ್ಲಾಡಳಿತ ಮತ್ತು ಮಹಾನಗರಪಾಲಿಕೆ ಹಾಗೂ ವಿವಿಧ ಇಲಾಖೆಗಳು ಎಲ್ಲ ರೀತಿಯ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಮನವಿ ಮಾಡಿದರು.

ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ಸರಳವಾಗಿ ಕುಸ್ತಿ ಪಂದ್ಯಾವಳಿ ಹಾಗೂ ಕುರಿ ಕಾಳಗಗಳನ್ನು ಆಯೋಜನೆ ಮಾಡಲಾಗಿದೆ. ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಗೆ ಎಲ್ಲಾ ರೀತಿಯ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.

ಮಹಾನಗರ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ್, ಉಪ ಮೇಯರ್ ಗಾಯಿತ್ರಿಬಾಯಿ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಬಿ.ಎಸ್ ಗಿರೀಶ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ.ಮುದಜ್ಜಿ, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಪಶು ಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಚಂದ್ರಶೇಖರ ಸುಂಕದ್, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವಿಜಯಕುಮಾರ್, ದೇವಸ್ಥಾನ ಆಡಳಿತ ಮಂಡಳಿ ಸದಸ್ಯರು ಹಾಗು ಇತರರು ಹಾಜರಿದ್ದರು.

## ನೆರವಿನ ನೆಪದಲ್ಲಿ ಎ.ಟಿ.ಎಂ. ವಂಚನೆ

**(1ನೇ ಪುಟದಿಂದ)** ಯಾಗಿದ್ದಾನೆ ಎಂದವರು ಹೇಳಿದ್ದಾರೆ.

ಕಳೆದ ವರ್ಷ ನವೆಂಬರ್ 30 ರಂದು ದಾವಣಗೆರೆ ತಾಲ್ಲೂಕಿನ ಮುಚ್ಚನೂರು ಗ್ರಾಮದ ಪಾಪಣ್ಣ ಎಂಬುವವರಿಗೆ ಆರೋಪಿಯು ಮಂಡಿಪೇಟೆಯ ಎಸ್.ಬಿ.ಐ. ಎಟಿಎಂ ಕೇಂದ್ರದಲ್ಲಿ ಹಣ ಬಿಡಿಸಿಕೊಡುವುದಾಗಿ ಹೇಳಿ 69,200 ರೂ., ವಂಚಿಸಿದ್ದ. ಈ ಬಗ್ಗೆ ಅವರು ಬಸವನಗರ ಠಾಣೆಗೆ ದೂರು ದಾಖಲಿಸಿದ್ದರು. ನಂತರ ಸಿಸಿಟಿವಿ ದೃಶ್ಯಗಳನ್ನು ಗಮನಿಸಿದಾಗ ಆರೋಪಿ ಪತ್ತೆಯಾಯಿತು ಎಂದು ಮಾಹಿತಿ ನೀಡಿದರು.

ಹಗರಿಬೊಮ್ಮನಹಳ್ಳಿಯಲ್ಲಿ ಎಟಿಎಂ ಸಹಾಯದ ಹೆಸರಲ್ಲಿ ವಂಚಿಸಿದ್ದ 3 ಲಕ್ಷ ರೂ. ದೊಡ್ಡ ಮೊತ್ತ ಸೇರಿ ಆರೋಪಿಯಿಂದ 8,58,800 ರೂ. ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರೆಸಲಾಗಿದೆ ಎಂದರು.

ಇಂಗ್ಲಿಷ್ ವಿಷಯದಲ್ಲಿ ಎಂ.ಎ. ಸ್ನಾತಕೋತ್ತರ ಪದವಿ ಪಡೆದು, ಪಿಹೆಚ್‌ಡಿ ಮಾಡಿಕೊಂಡಿದ್ದ ಆರೋಪಿ ಯೋಗಾನಂದ ಅವಿವಾಹಿತನಾಗಿದ್ದು, ಯಾವುದೇ ಉದ್ಯೋಗ ಸಿಗದೆ ಎಟಿಎಂ ಕಳ್ಳತನಕ್ಕಿಳಿದಿದ್ದ ಎನ್ನಲಾಗಿದೆ.

ನಗರ ಉಪವಿಭಾಗದ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ಅವರ ಮಾರ್ಗದರ್ಶನದಲ್ಲಿ ಬಸವನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ನಾಗಪ್ಪ ಬಂಕಾಳಿ ನೇತೃತ್ವದಲ್ಲಿ ಸಿಬ್ಬಂದಿಗಳಾದ ಪಿಎಸ್‌ಐ ಲಲಿತಮ್ಮ, ಫಕ್ರುದ್ದೀನ್ ಅಲಿ, ಮಹಮದ್ ರಫಿ, ಕೆ. ಗಣೇಶ್, ಮಹಮದ್ ಯೂಸೂಫ್ ಅತ್ತಾರ, ಮಾಲತೇಶ ಕೆಳಗಿನಮನಿ ಅವರನ್ನೊಳಗೊಂಡ ತಂಡ ಆರೋಪಿ ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದೆ ಎಂದರು.

## ಹರಿಹರ-ಹೊಸಪೇಟೆ ಮಾರ್ಗದಲ್ಲಿ ನಾಳೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

11 ಕೆ.ವಿ ಎಫ್-1 ಮಾಕನೂರು ಐಪಿ, ಎಫ್-2 ರಾಮ್ಕೋ, ಎಫ್-3 ನದಿಹರಳಹಳ್ಳಿ, ಎಫ್-4 ಕೋಡಿಯಾಲ, ಎಫ್-11 ಸಿಂಥೈಟಿ, ಎಫ್-13 W/S ಹರಿಹರ ಮತ್ತು ಎಫ್-12 ಹುಲಿಕಟ್ಟಿ ವಿದ್ಯುತ್ ಮಾರ್ಗಗಳ ಮೇಲೆ ಬರುವ ನಲವಾಗಲ, ಕೋಡಿಯಾಲ, ಮಾಕನೂರು ಮತ್ತು ಕವಲೆತ್ತು ಗ್ರಾಮಗಳಲ್ಲಿ ನಾಳೆ ದಿನಾಂಕ 6 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 6 ರವರೆಗೆ ವಿದ್ಯುತ್ ಸರಬರಾಜು ಇರುವದಿಲ್ಲ.

# ನವೀನ್ ಮನೆಗೆ ಮಾಜಿ ಸಿಎಂ ಯಡಿಯೂರಪ್ಪ ಭೇಟಿ, ಸಾಂತ್ವನ



ರಾಣೇಬೆನ್ನೂರು, ಮಾ.4 -ಉಕ್ರೇನ್ ಯುದ್ದದಲ್ಲಿ ಮೃತಪಟ್ಟ ತಾಲ್ಲೂಕಿನ ಚಳಗೇರಿ ಗ್ರಾಮದ ನವೀನ್ ಮನೆಗೆ ಮಾಜಿ ಸಿ.ಎಂ. ಬಿ.ಎಸ್.ಯಡಿಯೂರಪ್ಪ ಶುಕ್ರವಾರ ಸಂಜೆ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ ಆತ್ಮಸ್ಥೈರ್ಯ ತುಂಬಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನವೀನ್ ಕುಟುಂಬಕ್ಕೆ ರಾಜ್ಯ ಸರ್ಕಾರದ ವತಿಯಿಂದ 25 ಲಕ್ಷ ರೂ. ಪರಿಹಾರ ನೀಡಲು ಮುಖ್ಯಮಂತ್ರಿಗಳು ನಿರ್ಧರಿಸಿದ್ದಾರೆ. ಶನಿವಾರ ಸಿಎಂ ಬಸವರಾಜ ಬೊಮ್ಮಾಯಿ ಪರಿಹಾರದ ಚೆಕ್ ನೀಡಲಿದ್ದಾರೆ ಎಂದರು.

ಉಕ್ರೇನ್‌ನಿಂದ ಪಾರ್ಥಿವ ಶರೀರ ತರಿಸಲು ಖುದ್ದು ಪ್ರಧಾನಿ ಮೋದಿ ಹೆಚ್ಚಿನ ಆಸಕ್ತಿ ವಹಿಸಿ ಆ ದೇಶದೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಈ ಕುರಿತು ಈಗಾಗಲೇ ನಾನು ಮತ್ತು ಸಿಎಂ ಅವರು ಮೋದಿ ಜತೆ ಮಾತನಾಡಿದ್ದೇವೆ. ಅಲ್ಲಿ ಸದ್ಯ ಯುದ್ಧ ನಡೆಯುತ್ತಿದ್ದು ಪರಿಸ್ಥಿತಿ ತಿಳಿಯಾದ ನಂತರ ಮೃತದೇಹ ತರಲು ಅನುಕೂಲವಾಗುತ್ತದೆ. ಬಹುಶಃ ಎರಡು -ಮೂರು ದಿನಗಳಲ್ಲಿ ಶವ ತರಿಸುವ ಸಾಧ್ಯತೆಯಿದೆ ಎಂದರು.

ನವೀನ್ ನಿಧನರಾದ ದಿನವೇ ಇಲ್ಲಿಗೆ ಬರಬೇಕೆಂದುಕೊಂಡಿದ್ದೆ. ಆದರೆ ಪಾರ್ಥಿವ ಶರೀರದ ಜತೆ ಬರುವ ಚಿಂತನೆಯಿಂದ ತಡವಾಯಿತು. ಮಗ ಇಲ್ಲವಾಗಿದ್ದರೂ ಬದುಕಿರುವ ಉಳಿದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ದೇಶಕ್ಕೆ ಕರೆ ತರಲು ನವೀನ್ ತಾಯಿ ಕಳಕಳಿ ವ್ಯಕ್ತಪಡಿಸಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಯು.ಬಿ.ಬಣಕಾರ, ಶಾಸಕ ಅರುಣಕುಮಾರ ಪೂಜಾರ ಮತ್ತಿತರರಿದ್ದರು.

## ಸಂಪರ್ಕಿಸಿದ ತರಳಬಾಳು ಶ್ರೀ

**(1ನೇ ಪುಟದಿಂದ)** ಅಲ್ಲಿಗೆ ಬರುವುದು ಹೇಗೆಂಬುದು ವಿದ್ಯಾರ್ಥಿಗಳಿಗೆ ದಿಕ್ಕು ತೋಚದಂತಾಗಿದೆ.

ಸ್ಥಳೀಯ ಕೆಲವರು ತಲಾ 500 ಡಾಲರ್ ನೀಡಿದರೆ ಲೆವಿವ್‌ಗೆ ಕಳಿಸಲು ವ್ಯವಸ್ಥೆ ಮಾಡುವುದಾಗಿ ಹೇಳಿದ್ದಾರೆ. ಇದನ್ನು ನಂಬಿದ 60 ವಿದ್ಯಾರ್ಥಿಗಳು ಹಣ ಕೊಟ್ಟು ಬಸ್ ಏರಿದ್ದಾರೆ. ಆದರೆ, ಸ್ವಲ್ಪ ದೂರ ತೆರಳಿದ ನಂತರ ಮುಂದುವರೆಯಲು ಧೈರ್ಯವಾಗದೇ ಪಿಸೋಚಿನ್‌ಗೆ ವಾಪಸ್ ಬಂದಿದ್ದಾರೆ.

ಈ ವಿದ್ಯಾರ್ಥಿಗಳ ಪೈಕಿ ಬ್ಯಾಡಗಿಯ ಕುಶಾಲ್ ಈಶ್ವರ್ ಸಂಕಣ್ಣವರ್ ಹಾಗೂ ಗಂಗಾವತಿಯ ಹಿರೇಮಠ ಎಂಬುವವರು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರನ್ನು ಸಂಪರ್ಕಿಸಿ, ತಮ್ಮ ಕಷ್ಟ ಹೇಳಿಕೊಂಡಿದ್ದಾರೆ. ವಿಷಯ ತಿಳಿದ ತರಳಬಾಳು ಶ್ರೀಗಳು, ತಮಗೆ ವೈಯಕ್ತಿಕವಾಗಿ ಪರಿಚಯ ಇರುವ ರಾಯಭಾರಿಯೊಬ್ಬರನ್ನು ಸಂಪರ್ಕಿಸಿ, ವಿದ್ಯಾರ್ಥಿಗಳ ಕುರಿತು ಮಾಹಿತಿ ನೀಡಿದ್ದಾರೆ. ಪ್ರಧಾನ ಮಂತ್ರಿ ಕಚೇರಿಗೂ ಸಂಪರ್ಕಿಸಿ, ಅಲ್ಲಿನ ಅಧಿಕಾರಿಗಳ ಜೊತೆ ಮಾತನಾಡಿ ವಿದ್ಯಾರ್ಥಿಗಳ ರಕ್ಷಣೆಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೇಳಿದ್ದಾರೆ.

## ಅನಧಿಕೃತ ಗುಡಿಸಲುಗಳ ತೆರವು

**(1ನೇ ಪುಟದಿಂದ)** ಕಾರಣ ಅನಧಿಕೃತ ಗುಡಿಸಲು ತೆರವು ಮಾಡಲಾಯಿತು ಎಂದು ಮಹಾನಗರ ಪಾಲಿಕೆಯ ಹಿರಿಯ ಅಧಿಕಾರಿಯೊಬ್ಬರು ಸ್ಪಷ್ಟನೆ ನೀಡಿದ್ದಾರೆ.

ಎಸ್‌ಎಸ್ ಹೈಟೆಕ್ ಆಸ್ಪತ್ರೆಯಿಂದ ರೈಲ್ವೆ ಮಾರ್ಗದಲ್ಲಿ ಬರುವ ರಾಜಕಾಲುವೆ ಮತ್ತು ದನವಿನ ಓಣಿಯನ್ನು ಈ ಹಿಂದೆ ಕೆಲವರು ಬೆಳೆ ಬೆಳೆಯಲು ಉಪಯೋಗಿಸಿಕೊಳ್ಳುತ್ತಿದ್ದರು. ಇದೀಗ ಬೆಳೆಯನ್ನು ತೆಗೆದಿದ್ದು, ನಿರಾಶ್ರಿತರು ತಮಗೆ ಸೂರು ಕಲ್ಪಿಸುವಂತೆ ತಾತ್ಕಾಲಿಕವಾಗಿ ಗುಡಿಸಲು ಹಾಕಿಕೊಂಡಿದ್ದರು. ಈ ಸ್ಥಳದಲ್ಲಿ 1 ಎಕರೆ 30 ಗುಂಟೆ ಜಮೀನಿದ್ದು, ಇದು ಹಳ್ಳದ ಖರಾಬ್ ಆಗಿದೆ. ಅದರಲ್ಲಿ ಯಾವುದೇ ವಸತಿ, ಸ್ಮಶಾನ ಇತರೆ ಉದ್ದೇಶಗಳಿಗೆ ಬಳಸಬಾರದೆಂದು ಸರ್ಕಾರಿ ಆದೇಶವಿದೆ. ಈ ಹಿಂದೆ ಸಭೆ ನಡೆಸಿ ನೋಟೀಸ್ ನೀಡಿ ಜಾಗವನ್ನು ತೆರವು ಮಾಡುವಂತೆ ಸೂಚಿಸಲಾಗಿದ್ದರೂ ಒಪ್ಪಿರಲಿಲ್ಲ ಎಂದು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಜಾಗ ತೆರವು ಮಾಡಲು ಕೆಲವು ದಿನಗಳ ಹಿಂದೆ ಕಾರ್ಯಾಚರಣೆಗೆ ಮುಂದಾಗಿದ್ದೆವು. ಆದರೆ ಸ್ಥಳೀಯರ ಪ್ರತಿಭಟನೆಯ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆಯನ್ನು ಕೈಬಿಡಲಾಗಿತ್ತು. ಇಂದು ಅವುಗಳನ್ನು ತೆರವು ಮಾಡಿದ್ದೇವೆ ಎಂದು ಮಾಹಿತಿ ನೀಡಿದ್ದಾರೆ.


## ನಗರದಲ್ಲಿ ಇಂದು 'ಗಾತ ರಹೇ ಮೇರಾ ದಿಲ್ '





ಸಿನಿಮಾ ಸಿರಿ ಸಂಘಟನೆ ವತಿಯಿಂದ ಗಾನ ಕೋಗಿಲೆ ಲತಾ ಮಂಗೇಶ್ವರ್ ಸ್ಮರಣಾರ್ಥ 'ಗಾತ ರಹೇ ಮೇರಾ ದಿಲ್' ಸಂಗೀತ ಸಂಜೆ ಕಾರ್ಯಕ್ರಮವು ಇಂದು ಸಂಜೆ 5 ಗಂಟೆಗೆ ಶಿವಯೋಗಾಶ್ರಮ ಮಂದಿರದಲ್ಲಿ ನಡೆಯಲಿದೆ ಎಂದು ಸಂಘಟನೆ ಅಧ್ಯಕ್ಷ ಟಿ.ಎಂ. ಪಂಚಾಕ್ಷರಯ್ಯ ತಿಳಿಸಿದ್ದಾರೆ.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್ ಭಾಗವಹಿಸಲಿದ್ದಾರೆ ಎಂದರು. ಗಾಯಕರಾದ ರಕ್ಷ ಸರಳಾಯ, ಸಂಗೀತಾ ರಾಘವೇಂದ್ರ, ಟಿ. ಶೋಭ, ಎಂ.ಜಿ. ಜಗದೀಶ್, ಆರ್.ಟಿ. ಮೃತ್ಯುಂಜಯ, ಅಮಿತ್ ಶೇಖರ್ ಅವರಿಂದ ಲತಾ ಮಂಗೇಶ್ಕರ್ ಅವರು ಹಾಡಿದ 30ಕ್ಕೂ ಹೆಚ್ಚು ಹಾಡುಗಳನ್ನು ಹಾಡುವರು.

# ಹರಿಹರದ ಜನತೆಗೆ ನಿರಾಸೆ ತಂದ ಬಜೆಟ್ : ಶಿವಶಂಕರ್







ಹರಿಹರ, ಮಾ. 4 - ಮುಖ್ಯಮಂತ್ರಿಗಳು ಮಂಡಿಸಿದ ಬಜೆಟ್‌ನಲ್ಲಿ ಹರಿಹರ ಕ್ಷೇತ್ರಕ್ಕೆ ಯಾವುದೇ ರೀತಿಯ ಕೊಡುಗೆಯನ್ನು ನೀಡದೇ ಇರೋದರಿಂದ ತಾಲ್ಲೂಕಿನ ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹರಿಹರದ ಎಲ್ಲಾ ಪಕ್ಷಗಳ ರಾಜಕೀಯ ನಾಯಕರ ಬಳಿ ಉತ್ತಮ ಬಾಂಧವ್ಯ ಹೊಂದಿರುವ ಮುಖ್ಯಮಂತ್ರಿಗಳು ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ಅರಿತಿದ್ದಾರೆ. ಇಷ್ಟಲ್ಲದೆ ಹರಿಹರ ಕ್ಷೇತ್ರಕ್ಕೆ ಸಾಕಷ್ಟು ಬಾರಿ ಇಲ್ಲಿನ ವಿವಿಧ ಮಠಗಳ ಮಠಾಧೀಶರ ಬಳಿ ಬಂದು, ಹೋಗಿ ಮಾಡುತ್ತಾರೆ. ಕಳೆದ ವಾರ ಸಹ ಹರಿಹರ ನಗರಕ್ಕೆ ಆಗಮಿಸಿದ ವೇಳೆ ಈ ಬಾರಿಯ ಬಜೆಟ್‌ನಲ್ಲಿ ಹರಿಹರ ತಾಲ್ಲೂಕು ಜನತೆಗೆ ಉತ್ತಮ ಕೊಡುಗೆ ನೀಡುವುದಾಗಿ ಭರವಸೆ ನೀಡಿ ಹೋಗಿದ್ದರು. ಇಷ್ಟೆಲ್ಲಾ ಇದ್ದರೂ ಸಹ ಈ ಬಾರಿ ಬಜೆಟ್ ಮಂಡನೆ ಸಮಯದಲ್ಲಿ ಹರಿಹರ ಕ್ಷೇತ್ರದ ಅಭಿವೃದ್ಧಿಗೆ ಒಂದು ರೂಪಾಯಿ ಘೋಷಣೆ ಆಗಿರುವುದಿಲ್ಲ.

ಹರಿಹರ ಕ್ಷೇತ್ರದ ರೈತರ ಕುಟುಂಬದ ಬಹು ದೊಡ್ಡ ಸಮಸ್ಯೆಯಾದ ಭೈರನಪಾದ ಯೋಜನೆ, ನಗರದ ಜನತೆಗೆ ಬೇಸಿಗೆ ಕಾಲದಲ್ಲಿ ತುಂಗಭದ್ರಾ ನದಿಯಲ್ಲಿ ನೀರು ಇರದೇ ಇರೋದರಿಂದ ನೀರು ಶೇಖರಣಾ ಘಟಕ, ತಾಲ್ಲೂಕಿನಲ್ಲಿ ಹಲವಾರು ಗ್ರಾಮಗಳಲ್ಲಿ ರಸ್ತೆಗಳು ಹಾಳಾಗಿದ್ದರಿಂದ ದುರಸ್ತಿಗೆ ಹಣ ಬಿಡುಗಡೆ, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜು ಜೊತೆಗೆ ಕೃಷಿಗೆ ಸಂಬಂಧಿಸಿದ ಕಾಲೇಜು ಸ್ಥಾಪನೆ. ಹೀಗೆ ಹತ್ತು ಹಲವು ಬಗೆಯ ಸಮಸ್ಯೆಗಳ ಸರಮಾಲೆ ಇದ್ದರೂ ಒಂದಕ್ಕೂ ಆದ್ಯತೆ ನೀಡದೆ ಇರೋದರಿಂದ ಸ್ಥಳೀಯ ಕ್ಷೇತ್ರದ ಜನತೆ ಬಹಳ ದೊಡ್ಡಮಟ್ಟದ ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಮಾತನಾಡಿ, ಬಜೆಟ್‌ನಲ್ಲಿ ಭೈರನಪಾದ ಯೋಜನೆಗೆ ಹಣ ಬಿಡುಗಡೆ ಮಾಡದೇ ಇರುವುದು ಕ್ಷೇತ್ರದ ರೈತ ಸಮುದಾಯಕ್ಕೆ ಮಾಡಿರುವ ದೊಡ್ಡ ಅಪಮಾನವಾಗಿದೆ. ಸ್ಥಳೀಯ ಶಾಸಕರು ಅವರ ನಾಲ್ಕು ವರ್ಷದ ಅವಧಿಯನ್ನು ಬರೀ ಎಲ್ಲಾ ಇಲಾಖೆಗೆ ಮನವಿ ಕೊಡುವುದರಲೇ ಕಳೆದರು ಎಂದಿದ್ದಾರೆ.

ತುಂಗಭದ್ರಾ ನದಿ ದಂಡೆಯ ಮೇಲೆ ತುಂಗಾರತಿ ಕಾರ್ಯಕ್ರಮಕ್ಕೆ ಹಣ ಬಿಡುಗಡೆ ಮಾಡಲಾಯಿತು. ಆದರೆ ರೈತರ ಸಮಸ್ಯೆಗಳನ್ನು ಪರಿಹರಿಸಲು ಹಣ ನೀಡುವುದಕ್ಕೆ ಆಗಲಿಲ್ಲ. ಮೆಡಿಕಲ್ ಕಾಲೇಜು ಸ್ಥಾಪನೆ ವಿಚಾರಕ್ಕೆ ಹರಿಹರ ಕ್ಷೇತ್ರದ ಜನತೆ ಸಿ.ಎಂ. ಬಳಿ ನಿಯೋಗ ಹೋದರೆ ಅವರನ್ನು ಪರಿಗಣಿಸದೇ ಕಳಿಸಿರೋದು ನಿಯೋಗ ಹೋದವರಿಗೆ ಮತ್ತು ಕ್ಷೇತ್ರದ ಜನತೆಗೆ ಅಪಮಾನ ಮಾಡಿದಂತಾಗಿದೆ ಎಂದವರು ಹೇಳಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಮಾಧ್ಯಮ ವಕ್ತಾರರು ಹಾಗೂ ಜಿಪಂ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ಮಾತನಾಡಿ, ಜಿಲ್ಲೆಯ ಅಭಿವೃದ್ಧಿಗೆ ಸ್ಥಳೀಯ ಬಿಜೆಪಿ ಮುಖಂಡರು ಪ್ರಯತ್ನ ಮಾಡಲಿಲ್ಲ. ತಮ್ಮ ಸ್ವಂತ ಕೆಲಸಕ್ಕೆ ಆದ್ಯತೆ ನೀಡಿದರೆ ವಿನಃ ಜಿಲ್ಲೆಯ ಬಡವರ ಬಗ್ಗೆ ಚಿಂತನೆ ಮಾಡಿ ಅನೇಕ ಅಭಿವೃದ್ಧಿ ಕೆಲಸಗಳಿಗೆ ಅನುದಾನ ಬಿಡುಗಡೆ ಮಾಡಿಸಿಲ್ಲ ಎಂದು ಆರೋಪಿಸಿದ್ದಾರೆ.

> "ಬಜೆಟ್ ಆಗಿದೆ. ಶಿಕ್ಷಣ, ಉದ್ಯೋಗ, ನೀರಾವರಿ ಸೇರಿದಂತೆ ಎಲ್ಲಾ ವರ್ಗದ ಬಡವರಿಗೆ ಹಾಗೂ ಉತ್ತರ ಕರ್ನಾಟಕ ಭಾಗದ ರೈತರಿಗೆ ಹೆಚ್ಚು ಅನುಕೂಲ ಕಲ್ಪಿಸಲಾಗಿದೆ
> -ಎಸ್.ಎಂ.ವೀರೇಶ್, ಅಧ್ಯಕ್ಷರು, ಜಿಲ್ಲಾ ಬಿಜೆಪಿ


ಹರಿಹರ ಕ್ಷೇತ್ರದ ಬಡವರ ಪರವಾಗಿ ಮತ್ತು ಭೈರನಪಾದ ಯೋಜನೆಗೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ಎಸ್. ಎಂ. ವೀರೇಶ್ ಮತ್ತು ಮಾಜಿ ಶಾಸಕ ಬಿ.ಪಿ. ಹರೀಶ್ ಹೆಚ್ಚು ಒತ್ತಡ ಹಾಕಿ ಅಭಿವೃದ್ಧಿ ಕೆಲಸಗಳಿಗೆ ಹಣ ಬಿಡುಗಡೆ ಮಾಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್ ಮಾತನಾಡಿ, ಬಜೆಟ್‌ನಲ್ಲಿ ಮಧ್ಯಮ ವರ್ಗದವರಿಗೆ, ವಿದ್ಯಾರ್ಥಿಗಳಿಗೆ, ರೈತರಿಗೆ ಉಪಯುಕ್ತವಾಗುವ ಕೆಲಸಗಳಿಗೆ ಆದ್ಯತೆ ನೀಡಿದ್ದರಿಂದ ಇದೊಂದು ಆಶಾದಾಯಕ ಎಂದಿದ್ದಾರೆ.

## ಅಣಜಿಯಲ್ಲಿ ಇಂದು ಮಹಿಳಾ ಸಮಾವೇಶ, ನಗೆಹಬ್ಬ

ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದ ಹ್ಯಾಳೇದ ವೀರಪ್ಪ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಇಂದು ಸಂಜೆ 4 ಗಂಟೆಗೆ ಬಿ.ಎಂ.ವಾಗೀಶ್ ಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ಸಮಾವೇಶ ಹಾಗೂ ನಗೆಹಬ್ಬ - 2022 ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಖ್ಯಾತ ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್, ಪ್ರೊ. ಕೃಷ್ಣೇಗೌಡ, ನರಸಿಂಹ ಜೋಷಿ, ಬಸವರಾಜ ಮಾಮನಿ, ಶ್ರೀಮತಿ ಇಂದುಮತಿ ಸಾಲಿಮಠ ಭಾಗವಹಿಸಲಿದ್ದಾರೆ.

## ನ್ಯಾಮತಿಯಲ್ಲಿ ರಸ್ತೆ ಅಪಘಾತ: ಬಿಎಸ್ಸೆನ್ನೆಲ್ ಗುತ್ತಿಗೆ ನೌಕರನ ಸಾವು



ಹೊನ್ನಾಳಿ, ಮಾ.04 - ನ್ಯಾಮತಿ ತಾಲ್ಲೂಕಿನ ಚೀಲೂರು ಬಳಿ ಶುಕ್ರವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಹೊನ್ನಾಳಿ ಪಟ್ಟಣದ ಮಾರಿಕೊಪ್ಪ ರಸ್ತೆ ನಿವಾಸಿ, ಬಿಎಸ್‌ಎನ್‌ಎಲ್ ಗುತ್ತಿಗೆ ನೌಕರ ಪ್ರದೀಪ್ ಮುರಾರಿ (36) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ತುಮ್ಮಿನಕಟ್ಟೆ ರಸ್ತೆ ಬದಿಯ ತುಂಗಭದ್ರಾ ನದಿ ತೀರದ ಹಾಲುಮತ ಸಮಾಜದ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಿತು.

## ಆಟೋ ಪಲ್ಟಿ : ಮಹಿಳೆಯ ಸಾವು

ದಾವಣಗೆರೆ, ಮಾ.4- ಪ್ರಯಾಣಿಕರ ಆಟೋ ಪಲ್ಟಿ ಹೊಡೆದ ಪರಿಣಾಮ ಗೃಹಿಣಿಯೋರ್ವರು ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಸಂತೆಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಸಾಸಲು ರಸ್ತೆಯಲ್ಲಿ ನಡೆದಿದೆ. ಶ್ಯಾಗಲೆ ಗ್ರಾಮದ (38) ಶೋಭಾ ಮೃತ ದುರ್ದೈವಿ. ಮೃತ ಶೋಭಾ ಅವರು ತಮ್ಮ ಗ್ರಾಮದಿಂದ ನಿನ್ನೆ ಸಂಜೆ ಸಂತೆಬೆನ್ನೂರು ಗ್ರಾಮಕ್ಕೆ ಸಂತೆ ಮಾಡಿಕೊಂಡು ಬರಲು ಆಟೋದಲ್ಲಿ ತೆರಳಿದ್ದರು. ಅದೇ ಸಮಯಕ್ಕೆ ಹಸು ರಸ್ತೆಗೆ ಏಕಾಏಕಿ ಅಡ್ಡ ಬಂದಿದ್ದರಿಂದ ಆಟೋವನ್ನು ನಿಯಂತ್ರಿಸಲಾಗದೇ ಚಾಲಕನು ಹಸುವಿಗೆ ಡಿಕ್ಕಿಪಡಿಸಿದ್ದಾನೆ. ಪರಿಣಾಮ ಆಟೋ ರಸ್ತೆಯ ಮೇಲೆ ಪಲ್ಟಿಯಾಗಿದೆ. ಆಟೋದಲ್ಲಿದ್ದ ಮತ್ತೋರ್ವ ಪ್ರಯಾಣಿಕರಾದ ಗುಳ್ಳೆಹಳ್ಳಿ ಗ್ರಾಮದ ಗೀತಮ್ಮ ಸಹ ಗಾಯಗೊಂಡಿದ್ದಾರೆ.

# ವಿಜ್ಞಾನ ಸದ್ಬಳಕೆಯಾಗಲಿ : ಗುರುಸಿದ್ಧಸ್ವಾಮಿ



ದಾವಣಗೆರೆ, ಮಾ.3- ವಿಜ್ಞಾನ ಮನುಕುಲದ ಬದುಕು ಹಸನು ಮಾಡಲು ಸದ್ಬಳಕೆಯಾಗಬೇಕೇ ಹೊರತು ಜನರ ಸಾವು, ಬದುಕು ನಾಶಪಡಿಸಲು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ದುರಂತ ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ದಾವಣಗೆರೆ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ವಿಷಾದಿಸಿದರು.

ನಗರದ ಧ.ರ.ಮ ವಿಜ್ಞಾನ ಪದವಿ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ವಿಜ್ಞಾನ ಜನರ ಬದುಕು ಹಸನು ಮಾಡಲು ಹುಟ್ಟಿಕೊಂಡಿದೆ. ಆದರೆ ದುರಂತವೆಂದರೆ ಯುದ್ಧ ಎದುರಿಸುವ ಸಂಕಷ್ಟ ಸ್ಥಿತಿ ಪ್ರಪಂಚದ ಅನೇಕ ದೇಶಗಳಲ್ಲಿ ನಿರ್ಮಾಣವಾಗಿ ತತ್ತರಿಸಿ ಹೋಗಿವೆ. ನೂರಾರು ವಿದ್ಯಾರ್ಥಿಗಳ ಜೀವನ ಬೀದಿ ಪಾಲಾಗಿದೆ. ಸಾಕಷ್ಟು ಜನರು ಮರಣವನ್ನಪ್ಪಿದ್ದಾರೆ. ಇದು ವಿಜ್ಞಾನದ ಕೊಡುಗೆ ಎಂಬುದಾಗಿ ಟೀಕಾಕಾರರು ಟೀಕಿಸುತ್ತಿದ್ದಾರೆ. ವಿಜ್ಞಾನ ಯಾವತ್ತೂ ಧ್ವಂಸ ಕೃತ್ಯಗಳನ್ನು ಬೆಂಬಲಿಸುವುದಿಲ್ಲ ಎಂದು ತಿಳಿಸಿದರು.

ಧರ್ಮ ಹೇಗೆ ಸತ್ಯವನ್ನೇಳುವುದೋ ಹಾಗೆಯೇ ವಿಜ್ಞಾನವೂ ಸತ್ಯದ ಹಾದಿಯಲ್ಲಿ ನಡೆಯಬೇಕೆನ್ನುತ್ತದೆ. ಧರ್ಮ ಮತ್ತು ವಿಜ್ಞಾನ ಎರಡೂ ಒಂದೇ ನಾಣ್ಯದ ಮುಖಗಳಂತೆ. ಮನುಕುಲದ ನಾಶ, ಜನರ ಬದುಕು ಎರಡು ತತ್ತರಿಸಿ ಹೋಗುವಂತಹ ಅಣ್ವಸ್ತ್ರಗಳು ಬೇಕೇ ಎಂದು ಪ್ರಶ್ನಿಸಿಕೊಂಡು ಅದರ ತಯಾರಿಕೆ ಬಗ್ಗೆ ಚಿಂತಿಸುವಂತೆ ವಿಜ್ಞಾನಿಗಳಿಗೆ ಕರೆಕೊಟ್ಟರು.

ಬಹಳಷ್ಟು ದೇಶಗಳು ತಮ್ಮಲ್ಲಿರುವ ಮದ್ದು, ಗುಂಡುಗಳ ವ್ಯಾಪಾರ, ಮಾರಾಟವಾಗಲೆಂದು ಯುದ್ಧಕ್ಕೆ ತಯಾರಾಗಿ ನಿಲ್ಲುತ್ತವೆ. ಇಡೀ ಪ್ರಪಂಚದಲ್ಲಿ ಮದ್ದು ಗುಂಡು ತಯಾರಿಕೆಯಲ್ಲಿ ಶೇ. 60ರಷ್ಟು ಕಾರ್ಖಾನೆಗಳು ಅಮೇರಿಕಾದಲ್ಲಿವೆ. ಒಂದು ಕಡೆ ಶಾಂತಿಯನ್ನು ಬಯಸಿ, ಇತ್ತ ತಮ್ಮಲ್ಲಿರುವ ಮದ್ದು-ಗುಂಡಗಳ ಮಾರಾಟಕ್ಕಾಗಿ ಯುದ್ಧಗಳನ್ನು ಬಯಸುತ್ತಿವೆ ಎಂದು ಹೇಳಿದರು.

ರಾಮನ್ ಅವರ ಸಂಶೋಧನೆಯನ್ನು ಪ್ರಪಂಚಕ್ಕೆ ಗೊತ್ತು ಮಾಡಿದ ದಿನವೇ ವಿಜ್ಞಾನ ದಿನ. ಅಂದು ರಾಮನ್ ಅವರು ಪ್ರಪಂಚಕ್ಕೆ ಕೊಟ್ಟ ವಿಜ್ಞಾನದ ಕೊಡುಗೆ ಬಹಳ ಕಡಿಮೆ ಎಂದು ಪಾಶ್ಚಾತ್ಯರು ತಿಳಿಸಿದ್ದರು. ಒಟ್ಟು 250 ರೂ. ಮೌಲ್ಯದ ಉಪಕರಣದಲ್ಲೇ ನೊಬೆಲ್ ಪ್ರಶಸ್ತಿ ಪಡೆದ ಪ್ರಪಂಚದ ಭೌತ ವಿಜ್ಞಾನಿ ಇದ್ದರೆ ಅದು ರಾಮನ್.

21ನೇ ಶತಮಾನದಲ್ಲಿ ರಾಮನ್ ಅವರ ಸಂಶೋಧನೆಯ ಫಲ ಅತ್ಯಂತ ಉಪಯುಕ್ತ ಪಡೆಯಲಾಗುತ್ತಿದೆ. ರಾಮನ್ ಅವರ ಸಂಶೋಧನೆಯ ಪರಿಣಾಮ ಇತ್ತೀಚೆಗೆ ಬೆಳಕಿಗೆ ಬಂದಿರುವುದಕ್ಕೆ ವಿಜ್ಞಾನ ದಿನಾಚರಣೆಯೇ ಸಾಕ್ಷಿಯಾಗಿದೆ ಎಂದರು.

ಧ.ರ.ಮ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ. ಆರ್. ವನಜಾ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂಎಸಿ ಸಂಯೋಜಕರಾದ ಕಮಲಾ ಸೊಪ್ಪಿನ್ ಸೇರಿದಂತೆ ಇತರರು ಇದ್ದರು. ಗಣಿತ ವಿಭಾಗದ ಮುಖ್ಯಸ್ಥರಾದ ಮಂಗಳ ಗೌರಿ ಪ್ರಾರ್ಥಿಸಿದರು. ವಿಜ್ಞಾನ ವೇದಿಕೆಯ ಸಂಚಾಲಕರಾದ ಡಾ. ಬಿ.ಸಿ. ಚೇತನಾ ಸ್ವಾಗತಿಸಿದರು. ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಿ.ಸಿ. ಹರೀಶ್ ಕುಮಾರ್ ನಿರೂಪಿಸಿದರು. ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್.ಬಿ.ವಿ. ಸೌಮ್ಯ ವಂದಿಸಿದರು.

# ಆಚಾರ್ಯರ ಸಂಸ್ಕಾರದಿಂದ ಶಿಲೆಗೂ ದೈವತ್ವ




**ಡಾ.ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ 14ನೇ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಡಾ. ಶಂಭು ಬಳಿಗಾರ್**

ದಾವಣಗೆರೆ, ಫೆ. 4- ಡಾ. ಸದ್ಯೋಜಾತ ಶಿವಾಚಾರ್ಯ ಮ ಹಾ ಸ್ವಾ ಮೀ ಜಿ ಯ ವ ರು ನೀಡಿದ ಸಂಸ್ಕೃತಿ, ಸಂಸ್ಕಾರವನ್ನು ಮುಂದಿನ ಪೀಳಿಗೆಗೆ ಕಲಿಸುವ ಅಗತ್ಯವಿದೆ ಎಂದು ವಿಶ್ರಾಂತ ಪ್ರಾಚಾರ್ಯ ಡಾ.ಶಂಭು ಬಳಿಗಾರ ಹೇಳಿದರು.

ನಗರದ ಎಂ.ಸಿ.ಸಿ. ಬಿ ಬ್ಲಾಕ್‌ನಲ್ಲಿರುವ ಡಾ.ಸದ್ಯೋಜಾತ ಮಠದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಡಾ.ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿಯವರ 14ನೇ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಜಾನಪದ ನೆಲೆ-ಸಂಸ್ಕೃತಿ ಸೆಲೆ ಕುರಿತು ಅವರು ಉಪನ್ಯಾಸ ನೀಡಿದರು.

ಸಂಸ್ಕಾರ ನಮ್ಮನ್ನು ಬಹು ಎತ್ತರಕ್ಕೆ ಕೊಂಡೊಯ್ಯುತ್ತದೆ. ಆಚಾರ್ಯರ ಸಂಸ್ಕಾರದಿಂದ ಶಿಲೆಗೂ ದೈವತ್ವ ಲಭಿಸುತ್ತದೆ. ಸಂಸ್ಕಾರ ವಿಕಾರಗೊಂಡಾಗ ಮನುಷ್ಯನಲ್ಲಿ ಮೋಹ ಹೆಚ್ಚಾಗುತ್ತದೆ. ಸಮಾಜದಲ್ಲಿ ಅಶಾಂತಿ ಉಂಟಾಗುತ್ತದೆ ಎಂದು ಹೇಳಿದರು.

ಕಬ್ಬು ಪ್ರಕೃತಿಯಾದರೆ, ಕಬ್ಬನ್ನು ಹಿಂಡಿ ಹಾಲು ಮಾಡುವುದು ಸಂಸ್ಕೃತಿ. ಆದರೆ ಅದೇ ಕಬ್ಬನ್ನು ಕೊಳೆ ಹಾಕಿ ಹೆಂಡ ಮಾಡಿಕೊಂಡು ಕುಡಿಯುವುದು ವಿಕೃತಿಯಾಗುತ್ತದೆ ಎಂದರು.

ಶಿವಶರಣ ಕಾಯಕ, ದಾಸೋಹ ಪರಿಕಲ್ಪನೆ ಮರೆಯಾಗಿದೆ. ಪ್ರಾಮಾಣಿಕವಾಗಿ ಮಾಡಿದ ಕಾಯಕದಿಂದ ಬಂದ ಹಣದಲ್ಲಿ ಒಂದಿಷ್ಟು ಹಣವನ್ನು ದಾಸೋಹಕ್ಕೆ ಮೀಸಲಿಡಬೇಕು. ಹಸಿದವರಿಗೆ ಅನ್ನ ನೀಡಬೇಕು. ನಡೆ-ನುಡಿ ಒಂದಾಗಿರಬೇಕು ಎಂದು ಶಿವಶರಣರು ಸಾರಿದ್ದರು. ಆದರೆ ಇಂದು ಅದೆಲ್ಲಾ ಮರೆಯಾಗಿ ಸಂಸ್ಕೃತಿ, ಸಂಸ್ಕಾರ ಇಲ್ಲವಾಗಿದೆ. ಕೊರೊನಾದಿಂದಾಗಿ ಕಷ್ಟದ ದಿನಗಳನ್ನು ಕಳೆದಿದ್ದೇವೆ. ಆದದ್ದೆಲ್ಲಾ ಒಳಿತಿಗೆ ಎಂಬ ಭಾವನೆಯಿಂದ, ಒಳ್ಳೆಯದರ ಬಗ್ಗೆಯೇ ಆಲೋಚಿಸಬೇಕು ಎಂದು ಹೇಳಿದರು.

ಕೈಗಾರಿಕೋದ್ಯಮಿ ಅಥಣಿ ಎಸ್.ವೀರಣ್ಣ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿಯವರೊಟ್ಟಿಗಿನ ಒಡನಾಟವನ್ನು ಸ್ಮರಿಸಿದರು. ನಾವು ಮಾಡುವ ಯಾವುದೇ ಕೆಲಸ, ಕಾರ್ಯಗಳಿಗೆ ಅವರ ಸಲಹೆ ಪಡೆಯುತ್ತಿದ್ದೆವು ಎಂದು ಸ್ಮರಿಸಿದರು.

ವರ್ತಕ ಬಿ.ಸಿ. ಉಮಾಪತಿ ಮಾತನಾಡುತ್ತಾ, ಸದ್ಯೋಜಾತ ಶ್ರೀಗಳಂತವರು ನಮಗೆ ಹಿಂದೆ ಸಿಕ್ಕಿರಲಿಲ್ಲ, ಮುಂದೆಯೂ ಸಿಗುವುದಿಲ್ಲ. ಅವರು ಒಂದು ಸಮಾಜಕ್ಕೆ ಮಾತ್ರ ಸೀಮಿತರಾಗದೇ, ಸರ್ವ ಧ ರ್ಮ ದ ವ ರಿ ಗೂ ಸ್ವಾಮೀಜಿಗಳಾಗಿದ್ದರು ಎಂದು ಬಣ್ಣಿಸಿದರು.

ಕಾಯಕ ಜೀವಿಗಳಾಗಿದ್ದ ಅವರು ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ನಮಗೆಲ್ಲಾ ಅವರೇ ಮಾರ್ಗದರ್ಶಕರಾಗಿದ್ದರು. ಅವರೇ ತಯಾರಿಸಿದ ಊಟವನ್ನು ನಮಗೆ ಬಡಿಸುತ್ತಿದ್ದರು. ಕಾರು ಕೊಳ್ಳುವ ಸಲಹೆಯನ್ನು ನಯವಾಗಿಯೇ ತಿರಸ್ಕರಿಸುತ್ತಿದ್ದರು. ಅಂತಹ ಸರಳತೆ ಬೇರಾವ ಸ್ವಾಮೀಜಿಗಳಲ್ಲೂ ಇಲ್ಲ ಎಂದು ಹೇಳಿದರು.

ಪಾಲಿಕೆ ಮಾಜಿ ಮೇಯರ್ ಎಸ್.ಟಿ. ವೀರೇಶ್, ತಮ್ಮ ವಿದ್ಯಾರ್ಥಿ ಜೀವನದಲ್ಲಿ ಶ್ರೀಗಳೊಂದಿಗಿನ ಒಡನಾಟ ನೆನಪಿಸಿಕೊಳ್ಳುತ್ತಾ, ವಿದ್ಯಾರ್ಥಿ ಸಂಘಟನೆಗಳಲ್ಲಿ ತಪ್ಪುಗಳು ನಡೆದರೆ ಖಂಡಿಸುತ್ತಿದ್ದರು. ಅವರ ನುಡಿ ಅಷ್ಟೇ ಅಲ್ಲದೆ, ನಡೆಯೂ ಅನುಕರಣೀಯವಾಗಿತ್ತು ಎಂದು ಹೇಳಿದರು.

ಎಡೆಯೂರು ಕ್ಷೇತ್ರದ ಶ್ರೀ ರೇಣುಕ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಡಾ. ಸ್ವಾಮಿ ತ್ರಿಭುವಾನಂದ ಹಿರೇಮಠ ಸ್ವಾಗತಿಸಿದರು. ಶ್ರೀಮತಿ ವಿಜಯ ಹಿರೇಮಠ ಹಾಗೂ ಶ್ರೀ ಗುರು ಪಂಚಾಕ್ಷರ ಸಂಗೀತ ವಿದ್ಯಾಲಯದ ವಿದ್ಯಾರ್ಥಿ ವೃಂದದವರು ಪ್ರಾರ್ಥಿಸಿದರು.

# ಗೋಣಿವಾಡ: ವಿಜ್ಞಾನಿಗಳ ವೇಷಭೂಷಣ



ಗೋಣಿವಾಡ, ಮಾ.4- ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ಇಲ್ಲಿನ ಶ್ರೀ ಸೋಮೇಶ್ವರ ವಿದ್ಯಾಲಯದ ವಿದ್ಯಾರ್ಥಿಗಳು ದೇಶ ಕಂಡ ಅತ್ಯುನ್ನತ ವಿಜ್ಞಾನಿಗಳಾದ ಡಾ.ಅಬ್ದುಲ್ ಕಲಾಂ, ಸರ್ ಸಿ.ವಿ ರಾಮನ್, ಮೇರಿ ಕ್ಯೂರಿ ಮತ್ತಿತರೆ ವಿಜ್ಞಾನಿಗಳ ವೇಷ ಭೂಷಣ ಧರಿಸಿ ಅವರ ಸಾಧನೆಗಳನ್ನು ಪ್ರಸ್ತುತಪಡಿಸಿದರು. ಕಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ವಿವಿಧ ತರಕಾರಿಗಳ ವೇಷ ಧರಿಸಿ ಹಾಡನ್ನು ಹಾಡಿ ಅವುಗಳ ಮಹತ್ವವನ್ನು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಪಿ.ಎಚ್ ವೀಣಾ ಮತ್ತು ನಿರ್ದೇಶಕ ಪತ್ರೇಶ್, ಮಕ್ಕಳಿಗೆ ವಿಜ್ಞಾನ ದಿನದ ಮಹತ್ವವನ್ನು ತಿಳಿಸಿದರು.

# ಕೊಕ್ಕನೂರು : ಜೆಡಿಎಸ್ ಸದಸ್ಯತ್ವ ಅಭಿಯಾನಕ್ಕೆ ಶಿವಶಂಕರ್ ಚಾಲನೆ




ಮಲೇಬೆನ್ನೂರು, ಮಾ.4 - ಕೊಕ್ಕನೂರು ಗ್ರಾಮದಲ್ಲಿ ಜೆಡಿಎಸ್ ಸದಸ್ಯತ್ವ ಅಭಿಯಾನಕ್ಕೆ ಮಾಜಿ ಶಾಸಕ ಹೆಚ್.ಎಸ್ ಶಿವಶಂಕರ್ ಗುರುವಾರ ಚಾಲನೆ ನೀಡಿದರು. ನಂತರ ಜಿ.ಟಿ. ಕಟ್ಟೆ, ಮೂಗಿನಗೊಂದಿ, ಹಿಂಡಸಘಟ್ಟ ಮತ್ತು ಗೋವಿನಹಾಳ್ ಗ್ರಾಮಗಳಿಗೂ ತೆರಳಿ ಜೆಡಿಎಸ್ ಸದಸ್ಯತ್ವ ಮಾಡಿಸಲು ಪುಸ್ತಕಗಳನ್ನು ನೀಡಿದರು.

ಈ ವೇಳೆ ಮಾತನಾಡಿದ ಶಿವಶಂಕರ್ ಅವರು ಪ್ರತಿ ಬೂತ್‌ಗೂ ಕನಿಷ್ಠ 100 ಜನರ ಸದಸ್ಯತ್ವ ಮಾಡಿಸಿ ಎಂದು ಪಕ್ಷದ ಮುಖಂಡರಿಗೆ, ಕಾರ್ಯಕರ್ತರಿಗೆ ತಿಳಿಸಿದರು.

ಮುಂಬರುವ ಜಿ.ಪಂ, ತಾ.ಪಂ. ಮತ್ತು ವಿಧಾನಸಭೆ ಚುನಾವಣೆಯಲ್ಲಿ ಹರಿಹರ ತಾಲ್ಲೂಕಿನಲ್ಲಿ ಜೆಡಿಎಸ್ ತನ್ನ ಸಾಮರ್ಥ್ಯ ಪ್ರದರ್ಶಿಸಲಿದೆ ಎಂದ ಶಿವಶಂಕರ್ ಅವರು, ಬೇರು ಮಟ್ಟದಿಂದಲೂ ನಮ್ಮ ಕಾರ್ಯಕರ್ತರು, ಅಭಿಮಾನಿಗಳು ಗಟ್ಟಿಯಾಗಿದ್ದು ಗೆಲುವು ನಮ್ಮದೆ ಎಂದು ಮುಖಂಡರನ್ನು ಹುರಿದುಂಬಿಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಹರಿಹರ ತಾ. ಗ್ರಾಮಾಂತರ ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಹೆಚ್.ಟಿ . ಪರಮೇಶ್ವರಪ್ಪ, ಮಾಜಿ ಅಧ್ಯಕ್ಷ ಬಂಡೇರ ತಿಮ್ಮಣ್ಣ, ಜಿ.ಪಂ. ಮಾಜಿ ಸದಸ್ಯ ಗೋವಿನಹಾಳ್ ಬಸವರಾಜಪ್ಪ, ಮುಖಂಡರಾದ ಹಿಂಡಸಘಟ್ಟ ಮುರುಗೇಶಪ್ಪ, ವಾಸನದ ಗಂಟೇರ ಬಸವರಾಜಪ್ಪ, ಮುಗಿನಗೊಂದಿ ಕಾವೇರಿ ಹನುಮಂತಪ್ಪ, ಪಟೇಲ್ ಮಲ್ಲಪ್ಪ, ಈಶ್ವರಪ್ಪ, ಜಿಗಳಿಯ ಕೆ.ಆರ್.ರಂಗಪಪ್ಪ, ಎಕ್ಕಿಗೊಂದಿ ರುದ್ರಗೌಡ, ವಕೀಲ ವಿವೇಕ್, ಹೆಚ್.ಕೆ. ಹನುಮಂತ್, ದಾಸರ ನಾಗರಾಜ್, ಕೆ.ಪಿ. ಆಂಜನೇಯ ಪಾಟೀಲ್, ಜಿ.ಟಿ.ಶೆಟ್ಟಿಯ ಶಿವಾನಂದಸ್ವಾಮಿ, ಗೋವಿನಾಳ್ ದಡ್ಡಿ ಹನುಮಗೌಡ, ಮಲೇಬೆನ್ನೂರಿನ ಎಂ.ಆರ್. ಮಹಾದೇವಪ್ಪ ಸೇರಿದಂತೆ ಮತ್ತಿತರು ಹಾಜರಿದ್ದರು.

# ಮಹಿಳಾ ಸಂಘಗಳಿಗೆ ಏಕಗವಾಕ್ಷಿ ಸಾಲ ಸೌಲಭ್ಯ

ಬೆಂಗಳೂರು, ಮಾ. 4 - ಮಹಿಳಾ ಸ್ವ-ಸಹಾಯ ಸಂಘಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸಲು ಏಕಗವಾಕ್ಷಿ ಸಾಲ ಸೌಲಭ್ಯ ವ್ಯವಸ್ಥೆ ಕಲ್ಪಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಆಯ್ದ ಸ್ವ-ಸಹಾಯ ಸಂಘಗಳಿಗೆ ತಲಾ 1.5 ಲಕ್ಷ ರೂ. ನೆರವು ಕಲ್ಪಿಸಲು 500 ಕೋಟಿ ರೂ. ಅನುದಾನ ನೀಡಿದ್ದಾರೆ.

ಸ್ವ-ಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳ ಬ್ರ್ಯಾಂಡಿಂಗ್, ಮೌಲ್ಯವರ್ಧನೆ, ಪ್ಯಾಕಿಂಗ್ ಸೌಲಭ್ಯ ಒದಗಿಸಿ, ಮಾರುಕಟ್ಟೆ ಒದಗಿಸಲು 'ಅಸ್ಮಿತೆ' ಹೆಸರಿನಡಿ ಎಲ್ಲಾ ಉತ್ಪನ್ನಗಳ ಮಾರಾಟ; ಹೋಬಳಿ/ ಜಿಲ್ಲೆ/ ರಾಜ್ಯ ಮಟ್ಟದಲ್ಲಿ ಮಾರಾಟ ಮೇಳ ಆಯೋಜನೆ ಮಾಡಲಾಗುವುದು ಎಂದಿದ್ದಾರೆ.

ವಹಿವಾಟು, ಉದ್ಯೋಗ ಮತ್ತು ರಫ್ತು ಹೆಚ್ಚಳ ಗುರಿಯೊಂದಿಗೆ ಚಿಕ್ಕಬಳ್ಳಾಪುರದಲ್ಲಿ ಚರ್ಮದ ಬೊಂಬೆ, ಧಾರವಾಡದಲ್ಲಿ ಕಸೂತಿ, ಕೊಪ್ಪಳದಲ್ಲಿ ಕೌದಿ ಮತ್ತು ಕಿನ್ನಾಳ ಬೊಂಬೆ, ಮೈಸೂರಿನಲ್ಲಿ ಅಗರ ಬತ್ತಿ, ನವಲಗುಂದದಲ್ಲಿ ಜಮಖಾನಾ, ಚನ್ನಪಟ್ಟಣದಲ್ಲಿ ಆಟಿಕೆ ಹಾಗೂ ಇಳಕಲ್, ಗುಳೇದಗುಡ್ಡ, ಬೆಳಗಾವಿ - ಶಹಾಪುರ, ಶಿಡ್ಲಘಟ್ಟ ಮತ್ತು ಮೊಳಕಾಲ್ಮೂರಿನಲ್ಲಿ ಸೀರೆ ಮೈಕ್ರೋಕ್ಲಸ್ಟರ್ ಅಭಿವೃದ್ಧಿಗೆ ಒತ್ತು ಕೊಡಲಾಗುವುದು ಎಂದರು.


**WANTED**
Boys and Girls required for billing work at Food Mart Supermarket.
Quli: Any Degree
98864 63531

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ 'A' ಬ್ಲಾಕ್‌ನಲ್ಲಿ 15X50 ಪೂರ್ವ ಸೈಟ್, ಪೂರ್ವ ಬಾಗಿಲು ಮೊದಲನೆ ಮಹಡಿಯಲ್ಲಿ ಶಾಮನೂರು ರಸ್ತೆ, ಕರ್ನಾಟಕ ಬ್ಯಾಂಕ್ ಹಿಂಭಾಗದಲ್ಲಿ.
ನಾಗಭೂಷಣ
9740723330

**ಮಾರಾಟಕ್ಕೆ/ ಖರೀದಿಗೆ ವಿಚಾರಿಸಿರಿ**
ಹೆಚ್.ಕೆ.ಆರ್. ಸರ್ಕಲ್ ಹತ್ತಿರ 13x30 ಕೆಳಗೆ ಮಳಿಗೆ, ಮೇಲೆ ಸಿಂಗಲ್ ಬೆಡ್ ರೂಂ ಮನೆ
ಸುರೇಶ್ 95911 60520

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ನಗರದಲ್ಲಿ 30x50 ಉತ್ತರ, ನಿಜಲಿಂಗಪ್ಪ ಬಡಾವಣೆಯಲ್ಲಿ 30x30 ಪಶ್ಚಿಮ, ಭೂಮಿಕ ನಗರದಲ್ಲಿ 30x50 ಉತ್ತರ, ಜೆ.ಎಚ್. ಪಟೇಲ್ ಬಡಾವಣೆಯಲ್ಲಿ 20x30 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಡುಪ್ಲೆಕ್ಸ್ ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 30x52, ಬಸವೇಶ್ವರ ಬಡಾವಣೆ ಪೂರ್ವ ಕೆಳಗೆ 2 BHK ಮೇಲೆ ಡ್ಯೂಪ್ಲೆಕ್ಸ್, ಪಶ್ಚಿಮ 30x40 ಡ್ಯೂಪ್ಲೆಕ್ಸ್, ಪೂರ್ವ 22x45 (ಮಿನಿ ಡ್ಯೂಪ್ಲೆಕ್ಸ್), ಉತ್ತರ 30x36.
ಐಗೂರು ವಿಜಯಕುಮಾರ್
99457 02495

**WANTED**
Business Development Manager
www.nextstepz.in
89700 66666, 99645-46667

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ಬನಶಂಕರಿ ಲೇಔಟ್‌ನಲ್ಲಿ 70x63 Corner, 30x50 South, 30x50 West, 30x57 East, 30x40 West, 40 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Office work - 1
Sales- 1
Technician Service - 1
THE MOBILE SHOP
ASHOKA & AVK ROAD, DVG.
90608 83886

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಕುರಿಗಳು ದೊರೆಯುತ್ತವೆ**
ದಾವಣಗೆರೆ ತಾಲ್ಲೂಕು ಹಾಲುವರ್ತಿ ಗ್ರಾಮದಲ್ಲಿ ಇರುವ ಶ್ರೀ ದ್ಯಾಮಲಾಂಬ ಕುರಿ ಫಾರ್ಮನಲ್ಲಿ ಜವಾರಿ ತಳಿಯ ಕಪ್ಪು ಬಣ್ಣದ ಕುರಿ (ಟಗರು) ಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
83102-81603
63633-72395

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ ಬೇಕಾಗಿದ್ದಾರೆ. ಸಂಬಳ 9000 ರೂ. ಊಟ, ರೂಂ ಉಚಿತ.
97400 98064
97400 98047

**ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಉತ್ತರ 30x46 ಕೆಳಗೆ 2BHK ಮೇಲೆ Single BHK, J.H patel ಬಡಾವಣೆ ಪಶ್ಚಿಮ 30x40, ಬಸವೇಶ್ವರ ಬಡಾವಣೆ, ಪೂರ್ವ 30x40 ಕೆಳಗೆ 2BHK ಮೇಲೆ 2BHK ಮೇಲೆ Single attach room (Full furnished).
ಐಗುರು ವಿಜಯಕುಮಾರ್
99457 02495

**ಕುರಿ / ಟಗರುಗಳು ಮಾರಾಟಕ್ಕಿವೆ**
ಹರಪನಹಳ್ಳಿ ರೋಡ್, ಬಿ. ಚಿತ್ತಾನಹಳ್ಳಿಯಲ್ಲಿರುವ ನಮ್ಮ ಫಾರಂ ಹೌಸಿನ ತೋಟದ ಮನೆಯಲ್ಲಿ ಉತ್ತಮವಾದ ಕುರಿ / ಟಗರುಗಳು ಮಾರಾಟಕ್ಕೆ ದೊರೆಯುತ್ತವೆ.
87627 47245
80952 14840

**ಮನೆ ಬಾಡಿಗೆಗೆ ಇದೆ**
2BHK ಮೊದಲನೆ ಮಹಡಿ, ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
94489 63300

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ.) ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, 4 ನೇ ಮೇನ್, ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ಸರ್ಕಲ್ ಹತ್ತಿರ ದಾವಣಗೆರೆ.
81972 20933

**LEASE / ಲೀಜ್**
D.No. 1928/74/3, Chaitra Nivasa, 2nd Floor, Single Bed Room. Bapuji MBA College Main Road, S.S. Layout 'A' Block, Davangere-577004.
94484 39667, 94490 85201

**WANTED**
Telecallers (F), Accoutant (M) Sales officers (M/F), Works Manager (M), IT Technician, Software Testers / Developers.
98444 92888

**WANTED**
Boys - 3 , women - 2, Accountant-1 (Female) (B.Com, with computer knowledge), Executives - 2 (Female), Drivers - 3, Assistants (SSLC) to work in the warehouse of
PRO-MART ENTERPRISES
APMC Road, Davanagere
91139 24513

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಬಾಡಿಗೆಗೆ ಇದೆ**
ರೂಂ ಬಾಡಿಗೆಗೆ ಇದೆ. ಚಾಮರಾಜಪೇಟೆ, ದಾವಣಗೆರೆ.
82177 72482

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ 20th ಕ್ರಾಸ್, ಉತ್ತರ ದಿಕ್ಕಿನ 2 ಸೈಟುಗಳು ನಂ. 23, 24 40x60 + 40x60 ಮಾರಾಟಕ್ಕಿವೆ. ಸಂಪರ್ಕಿಸಿ.
99727 00163

**WANTED**
Accountants assistant - 01 post B.Com graduate with tally Knowledge 2-3 years Experience Appreciable Sales Executive - 01 Post Any Graduate with Electrical knowledge 2-3 years Experience appreciable. Cotmac Industrial Trading Pvt Ltd., Near Gandhi Circle, P.B. Road, Davanagere.
98800 19842, 98800 19811

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಮನೆ ಮಾರಾಟಕ್ಕೆ ಇದೆ**
ಎಂ ಸಿ ಸಿ ಎ ಬ್ಲಾಕ್ ನಲ್ಲಿ 7th ಮೇನ್ ರೋಡ್‌ನಲ್ಲಿ 22 × 66 ಹಳೆ RCC ಮನೆ ಮಾರಾಟಕ್ಕೆ ಇದೆ. ಬೇಕಾದವರು ಈ ಕೆಳಕಂಡ ಮೊಬೈಲ್‌ಗೆ ಸಂಪರ್ಕಿಸಬಹುದು
74837 21991,
91645 17536

**ಬೇಕಾಗಿದ್ದಾರೆ**
ಆಫೀಸ್ ನೋಡಿಕೊಳ್ಳಲು ಹುಡುಗಿಯರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನ ಕಡ್ಡಾಯ, E P OFFICE, ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂಸಿಸಿ 'ಎ' ಬ್ಲಾಕ್, ಸಂದರ್ಶನ ಸಮಯ : 9 to 10 am
9844678457

**ಬೇಕಾಗಿದ್ದಾರೆ**
ಹೋಟೆಲ್ ಉದ್ಯಮಕ್ಕೆ ರೂಮ್ ಬಾಯ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ:
94487 53131

**Required**
Female Telecallers. Freshers can apply Salary 10k + incentives
81057 81389

**ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
94481 54682

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ. ಐಗೂರು ರಸ್ತೆ.
ಸಂಪರ್ಕಿಸಿ 70196 02944
94807 46013

**TO-LET**
Commercial Space 2400 sq.ft for Rent G+1 with 80 ft Road, facing near RTO Office on Kondajji Main Road, available in differnet size suitable for Bank / ATM / Supermarket /Showroom / Polyclinic / Office / Parlour / Gym / Studio / Yoga Center etc.
99864 52968

**ಮನೆ ಬಾಡಿಗೆಗೆ ಇದೆ**
3BHK ಉಳ್ಳ ಡುಪ್ಲೆಕ್ಸ್ ಮನೆ ಮತ್ತು 1 BHK ಮನೆಗಳು ಬಾಡಿಗೆಗೆ ಇವೆ. ಗುರುನಾಥ.ಎಸ್. ಎಸ್. #3192/161, ಶ್ರೀ ಗುರು ಕೃಪ, ಕಾವೇರಿ ಅಪಾರ್ಟ್‌ಮೆಂಟ್ಸ್ ಹಿಂಭಾಗ, ಮಹಾಲಕ್ಷ್ಮಿ ಲೇಔಟ್, ಕುಂದುವಾಡ ರೋಡ್, ದಾವಣಗೆರೆ.
96200 76547, 94824 05929

**ಹೊಸ ಮನೆ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಗ್ರೀನ್ ಬಿಲ್ಡ್ ಡೆವಲಪರ್ಸ್ ನಿರ್ಮಿತ ಉತ್ತರ ದಿಕ್ಕಿನ 20X30 ಸೈಜಿನ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್ ಪ್ರತ್ಯೇಕದ ಫರ್ನಿಷ್, 2 ಬೆಡ್ರೂಮ್, ಸ್ವಂತ ಬೋರ್ ವೆಲ್ ಹೊಂದಿದೆ.
63601 09142

**ಮನೆ ಮಾರಾಟಕ್ಕಿದೆ**
20x30 ಅಳತೆಯ ಪೂರ್ವ ದಿಕ್ಕಿನ Final Approved Ground and First Floor ಮನೆ ಮಾರಾಟಕ್ಕಿದೆ. Near Bagirathi Circle, Davanagere.
87470 61217

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**REQUIRED**
Duty Doctors (MBBS/BAMS), Nurse, Female Receptionist, Computer/DTP Operator, Ayas/Ward Boy/Peon, Medical Representative (Marketing)
Contact : labntab.com@gmail.com
944817 78094

**ಸೈಟು ಮಾರಾಟಕ್ಕಿದೆ**
NH 4 ಸರ್ವೀಸ್ ರೋಡ್ ಗೆ (near Modern school ) ಅಟ್ಯಾಚ್ಮೆಂಟ್ ಗಿರುವ ತ್ರಿಭುಜಾಕಾರ ವಿನಾಯಕ ಬಡಾವಣೆ corner ಸೈಟು (0+150)/2×60 ಮಾರಾಟಕ್ಕಿದೆ. ಬೇಕಾಗಿರುವವರು ಈ ಕೆಳಕಂಡ ಮೊಬೈಲ್‌ಗೆ ಸಂಪರ್ಕಿಸಬಹುದು.
74837 21991, 91645 17536

**ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗಿದೆ**
1ನೇ ಫ್ಲೋರ್, 2ನೇ ಫ್ಲೋರ್ 1700sq each ಫ್ಲೋರ್ ಜಯನಗರ "ಬಿ" ಬ್ಲಾಕ್ ರೆಡ್ಡಿ ಬಿಲ್ಡಿಂಗ್ ಹಿಂಭಾಗ, ದಾವಣಗೆರೆ. (Suitable for Institution, Office work) 24x7 ನೀರಿನ ಸೌಲಭ್ಯ ಮತ್ತು ಪಾರ್ಕಿಂಗ್ ಸೌಲಭ್ಯವಿದೆ.
ಫೋ.: 95350 17621

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
97388 27452
74110 25934

**ಬೇಕಾಗಿದ್ದಾರೆ.**
SAKHI outlet ನಲ್ಲಿ ಕೆಲಸ ಮಾಡಲು 2-3 ವರ್ಷ ಬಟ್ಟೆ ಅಂಗಡಿಯಲ್ಲಿ experience ಹೊಂದಿರುವ ಯುವಕ, ಯುವತಿಯರು ಬೇಕಾಗಿದ್ದಾರೆ.
90361 12180

**ಬೇಕಾಗಿದ್ದಾರೆ**
ಅಕ್ಷಯದಲ್ಲಿ Receptionist Tele caller, Manager ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ.
90361 12180

**ಬೇಕಾಗಿದ್ದಾರೆ**
ಬ್ಯಾಗ್ ಅಂಗಡಿಯಲ್ಲಿ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳಾ ಟೆಲಿಕಾಲರ್ಸ್ ಹಾಗೂ ಸಹಾಯಕ ಹುಡುಗರು ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
88614 38237

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ 'ಲಲಿತ ನಿಲಯ' #5628/C-18, 4ನೇ ಮೇನ್, 7 ನೇ ಕ್ರಾಸ್ ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸೋಲಾರ್, ಬೋರ್ ಹಾಗೂ ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ.
90084 18081

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಬೇಕಾಗಿದ್ದಾರೆ.
78920 01147
83105 55646

**ರೂಂ ಬಾಡಿಗೆಗೆ ಇದೆ**
ವಿದ್ಯಾನಗರ 1st ಸ್ಟಾಪ್ ನೂತನ ಕಾಲೇಜು ರೋಡ್ #1365 / 10, ಶಿವಕೃಪ
94483 25572
79758 01324

**ಮನೆ ಬಾಡಿಗೆ/ ಲೀಸ್‌ಗೆ ಇದೆ**
ಕೊಟ್ಟೂರೇಶ್ವರ ಬಡಾವಣೆ ನಿಟ್ಟುವಳ್ಳಿಯಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ / ಲೀಸ್‌ಗೆ ಇದೆ.
96634 65543

**ದಾವಣಗೆರೆಯಲ್ಲಿ ನೂತನ ಆರಂಭ**
ದಾವಣಗೆರೆಯಲ್ಲಿ ನೂತನ ಆರಂಭ ಪ್ರೊಫೆಷನಲ್ ಹೇರ್, ಸ್ಕಾರಿ ಡ್ರಾಪಿಂಗ್ ಮತ್ತು ಮೇಕಪ್ ಟ್ರೈನಿಂಗ್‌ಗಳು ಆರಂಭವಾಗಲಿವೆ. ಬೇಸಿಕ್, ಅಡ್ವಾನ್ಸ್ ಕ್ಲಾಸ್‌ಗಳು ಜೊತೆಗೆ ಮಾರ್ಕೆಟಿಂಗ್ ಮತ್ತು ಕಮ್ಯೂನಿಕೇಷನ್ ಟ್ರೈನಿಂಗ್ ನೀಡಲಾಗುವುದು. ಮೊದಲು 15 ಜನರಿಗೆ ಮಾತ್ರ ಅವಕಾಶ.
99004 98933, 91104 05359
95388 85744

**ಬೇಕಾಗಿದ್ದಾರೆ**
ತಿಂಡಿ ಮಾಡುವವರು, ಗೋಬಿ ಮಾಡುವವರು, ಮಿರ್ಚಿ ಬಿಡುವವರು, ಟೀ ಮಾಡುವವರು, ಕಲಿಯಲು ಆಸಕ್ತಿ ಇರುವವರು ಬೇಕಾಗಿದ್ದಾರೆ.
98864 39097

**ಬೇಕಾಗಿದ್ದಾರೆ**
ಬೆಂಗಳೂರು, ಮೈಸೂರು, ಮಂಗಳೂರಿನಲ್ಲಿ ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಸಂಬಳ, ಉಚಿತ ಊಟ, ವಸತಿ, ತರಬೇತಿಯೊಂದಿಗೆ 12000 ರಿಂದ 16000 ವರೆಗೆ
74116 14209

**ಚಕ್ರ ಹೀಲಿಂಗ್, ಕೌನ್ಸಿಲಿಂಗ್**
ಮತ್ತು ನಿದ್ರಾಹೀನತೆ ,ಮಂಡಿ ನೋವು, ಸ್ನಾಯು ನೋವು, ಬಿ.ಪಿ, ಅಸ್ತಮಾ, ಗ್ಯಾಸ್ಟ್ರೈಟಿಸ್, ಮೈಗ್ರೇನ್, ಸಕ್ಕರೆ ಕಾಯಿಲೆ, ಒತ್ತಡ, ಆತಂಕ, ಭಯ, ಖಿನ್ನತೆ, ಆಘಾತಗಳಿಗೆ ಚಿಕಿತ್ಸೆ ನೀಡಲಾಗುವುದು.
93803 89236

**ಕೆಲಸಕ್ಕೆ ಬೇಕಾಗಿದ್ದಾರೆ**
ಓಲ್ಡ್ ಏಜ್ ಕೇರ್ ಸೆಂಟರ್‌ನಲ್ಲಿ ಆಯಾ ಕೆಲಸ ಮಾಡಲು ಪುರುಷ & ಮಹಿಳೆಯರು ಬೇಕಾಗಿದ್ದಾರೆ.
89711 92936,
76250 15036

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಡಾಕ್ಟರ್ ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನ ಕ್ಲಿನಿಕ್‌ಗೆ B.A.M.S, B.H.M.S Gen Physician Pedeatric Dental, Ortho, Eye Doctors ಬೇಕಾಗಿದ್ದಾರೆ. ಶಾಪ್‌ಗಳಿಗೆ ಬರುವಂತಹ ಪ್ಲೇವುಡ್ ರ‍್ಯಾಕ್ಸ್ ಮಾರಾಟಕ್ಕಿದೆ.
70192 49897

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
SSLC, PUC, Technical & Non Technical, Pharmacy & BHMS (Government & Private College)
ಕೆಲವೇ ಸೀಟುಗಳು ಲಭ್ಯ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 82173 02649

**ಡಾ. ಆಶುತೋಷ ವಾಹಿ**
ಕನ್ಸಲ್ಟಿಂಗ್ ಹೋಮಿಯೋಪತಿ ತಜ್ಞರು
B.H.M.S.C.C.H., PGDCR, Thyroid, PCOD, Diabetes, ಉಚಿತ ಸಮಾಲೋಚನೆ.
ದಿನಾಂಕ : 7.3.2022ರ ಸೋಮವಾರ ಮತ್ತು 8.3.2022ರ ಮಂಗಳವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಹೆಲ್ತ್‌ಕೇರ್ ಹೋಮಿಯೋಪತಿ 5ನೇ ಮೇನ್, 3ನೇ ಕ್ರಾಸ್, MCC ಬಿ ಬ್ಲಾಕ್, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ-4.
72593 00823, 91482 90536

**ಕೆಲಸಕ್ಕೆ ಬೇಕಾಗಿದ್ದಾರೆ**
ಮಕ್ಕಳನ್ನು ನೋಡಿಕೊಂಡು, ಮನೆ ಕೆಲಸ ಮಾಡುವವರು 18-30 ವಯಸ್ಸಿನ ಮಹಿಳೆಯರು ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 8 ರಿಂದ ಸಂಜೆ 4 ರವರೆಗೆ ವಿಳಾಸ: ಎಸ್.ಎಸ್. ಲೇಔಟ್, ಬಿ. ಬ್ಲಾಕ್, ಗಡಿಯಾರ ವೃತ್ತ ಹತ್ತಿರ, ದಾವಣಗೆರೆ.
96268 95105, 96263 44451

**Pi Academy**
TEACHERS REQUIRED
Parttime/Full Time
B.Sc. B.Ed (PCM) 1 Post, B.Sc. B.Ed (CBZ)1 Post, M.Sc. B.Ed (Bio) 1 Post,
V.RAJU(9964229344)
Visiting Hour : 4.P.M to 5.P.M, 60 ft Road, S.Nijalingappa Layout, Dvg.

**ಬೇಕಾಗಿದ್ದಾರೆ**
ದೋಸೆ ಭಟ್ಟರು ಮತ್ತು ಸಪ್ಲೈಯರ್, ಕ್ಲೀನರ್ ಬೇಕಾಗಿದ್ದಾರೆ. ಸಿದ್ದಗಂಗಾ ಹೋಟೆಲ್ ದಾವಣಗೆರೆ
ಸಂಪರ್ಕಿಸಿ.
70190 73163

**ರಾಜಾ ರಾಣಿ ಹೋಂ ಫುಡ್ ಪ್ರಾಡಕ್ಟ್**
ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಜೋಳದ ರೊಟ್ಟಿಗಳು ದೊರೆಯುತ್ತವೆ. #624/48, 60 ಅಡಿ ರಿಂಗ್ ರಸ್ತೆ, ಆನಂದ ಅಕಾಡೆಮಿ ಎದುರು, ನಿಟ್ಟುವಳ್ಳಿ , ದಾವಣಗೆರೆ.
73492 64838

# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಲ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

ಫೋನ್: 08192 - 223913, 233632 e-mail: rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 19-03-2022 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 19-03-2022 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಹರ್ಲಾಪುರ, ಹರಿಹರ ತಾ||, ದಾವಣಗೆರೆ ಜಿಲ್ಲೆ. ಮೊ: 9972949722**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಜಗದೀಶ್ ಸಿ. ಬಿನ್. ಲಕ್ಷ್ಮಪ್ಪ, 193ಎ, 2ನೇ ಕ್ರಾಸ್,ಹಳೇ ಹರ್ಲಾಪುರ. | 40991302016720 | 1,77,151-00 |

**ಶಾಖೆ: ಅತ್ತಿಗೆರೆ, ದಾವಣಗೆರೆ ತಾ||, ಜಿಲ್ಲೆ. ಮೊ: 9743661504**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಚಂದ್ರಶೇಖರಯ್ಯ ಎಂ.ಎಸ್. ಬಿನ್. ಸಿದ್ದಲಿಂಗಯ್ಯ ಎಂ.ಆರ್. ಗೋಪನಾಳ್ | 40526302082121 | 80,289-00 |
| 2 | ಶ್ರೀ ವೀರಭದ್ರಪ್ಪ ಬಿ.ಸಿ. ಬಿನ್. ಚನ್ನಬಸಪ್ಪ, ರಾಮಗೊಂಡನಹಳ್ಳಿ | 40526302086420 | 37,483-00 |

**ಶಾಖೆ: ಬೇತೂರು, ದಾವಣಗೆರೆ ತಾ||, ಜಿಲ್ಲೆ. ಮೊ: 7892926203, 8971353643**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಬಸವರಾಜಪ್ಪ ಬಿನ್. ಪರಮೇಶ್ವರಪ್ಪ, ಬೇತೂರು | 40555302043820 | 88,719-00 |
| 2 | ಶ್ರೀಮತಿ ಚಂದ್ರಮ್ಮ ಕೇ/ಆಫ್ ಜೀವಪ್ಪ, 371, 2ನೇ ಕ್ರಾಸ್, ಸಿದ್ದರಾಮೇಶ್ವರ ಬಡಾವಣೆ, ಬೇತೂರು. | 40555302038820 | 1,19,721-00 |

**ಶಾಖೆ: ಬೆಳ್ಳೂಡಿ, ಹರಿಹರ ತಾ||, ದಾವಣಗೆರೆ ಜಿಲ್ಲೆ. ಮೊ: 8892663029**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ಗಂಗಮ್ಮ ಕೋಂ. ಹನುಮಂತಪ್ಪ, ಬನ್ನಿಕೋಡು | 40553302034720 | 39,932-00 |

**ಶಾಖೆ: ಬಸವನಕೋಟೆ, ಜಗಳೂರು ತಾ||. ದಾವಣಗೆರೆ ಜಿಲ್ಲೆ. ಮೊ: 9663543617**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಹಾಲೇಶಪ್ಪ ಬಿನ್. ಈರಪ್ಪ, ಜಾಡನಕಟ್ಟೆ | 40547302024320 | 26,969-00 |
| 2 | ಶ್ರೀ ನಾಗರಾಜ ಬಿನ್. ಸಣ್ಣ ಸಿದ್ದಪ್ಪ, ಹುಚ್ಚಂಗಿಪುರ | 40547302017420 | 75,428-00 |

**ಶಾಖೆ: ವಾಸನ, ಹರಿಹರ ತಾ||, ದಾವಣಗೆರೆ ಜಿಲ್ಲೆ. ಮೊ: 9901581226**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಜಗದೀಶ್ ಬಿನ್. ಗದ್ದಿಗೆಪ್ಪ, ಕಡಾರನಾಯಕನಹಳ್ಳಿ | 40855302005620 | 9,442-00 |
| 2 | ಶ್ರೀ ನಂದಿಗುಡಿ ಬಸಪ್ಪ ಬಿನ್.ಬಾಳಪ್ಪ ಎ.ಕೆ., ವಾಸನ | 40855302020221 | 26,016-00 |

**ಶಾಖೆ: ಕಕ್ಕರಗೊಳ್ಳ, ದಾವಣಗೆರೆ ತಾ||, ಜಿಲ್ಲೆ. ಮೊ: 9986514939**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ಗೌರಮ್ಮ ಎಸ್.ಬಿ. ಕೋಂ. ನಿಂಗಪ್ಪ ಎಂ.ಜಿ., ಕಕ್ಕರಗೊಳ್ಳ | 40678302090720 | 3,91,934-00 |
| 2 | ಶ್ರೀಮತಿ ಕಮಲಮ್ಮ ಕೋಂ. ಶಿವಾನಂದಪ್ಪ, ಕಕ್ಕರಗೊಳ್ಳ | 40678302006321 | 93,695-00 |
| 3 | ಶ್ರೀ ಸುರೇಶ್ ಬಾಬು ಬಿನ್. ವೀರರಾಜು, ಅರಸಾಪುರ | 40678302137321 | 1,37,982-00 |

**ಶಾಖೆ: ತುರ್ಚಘಟ್ಟ, ದಾವಣಗೆರೆ ತಾ||, ಜಿಲ್ಲೆ. ಮೊ: 7483202057**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಅಣ್ಣೇಶ್ ವೈ.ಎಸ್. ಬಿನ್. ವೈ. ಶಿವಾನಂದಪ್ಪ, ಬೆಳವನೂರು | 40847302051020 | 87,944-00 |
| 2 | ಶ್ರೀಮತಿ ಅಲ್ತಾಫ್‌ಬಿ ಕೋಂ. ಅಬ್ದುಲ್ ರೆಹಮಾನ್, ತುರ್ಚಘಟ್ಟ | 40847302057521 | 25,000-00 |
| 3 | ಶ್ರೀ ನಟರಾಜನ್ ಆರ್. ಬಿನ್. ರಂಗಸ್ವಾಮಿ ಪಿ. ಗೌಡರ್, ಕೆ.ಟಿ.ಜೆ. ನಗರ. | 40847302052920 | 1,19,193-00 |
| 4 | ಶ್ರೀ ಸಿದ್ದೇಶ್ ಬಿ.ಕೆ. ಬಿನ್. ಬಸವರಾಜ್, ಹೊಸ ಬೆಳವನೂರು | 40847302029220 | 14,666-00 |

**ಶಾಖೆ: ಜಗಳೂರು, ಜಗಳೂರು ತಾ||, ದಾವಣಗೆರೆ ಜಿಲ್ಲೆ. ಮೊ: 9380473722**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ನಾಗರಾಜ ಜಿ.ಎನ್. ಬಿನ್. ನಿಂಗಪ್ಪ, ಹನುಮಂತಾಪುರ ಗೊಲ್ಲರಹಟ್ಟಿ | 40670302042020 | 12,279-00 |
| 2 | ಶ್ರೀ ಪಾಪಯ್ಯ ಆರ್. ಜಗಳೂರು | 40670302010821 | 5,02,352-00 |
| 3 | ಶ್ರೀ ಹನುಮಂತಪ್ಪ ಎಸ್.ಹೆಚ್. ಬಿನ್. ಹನುಮಪ್ಪ, ಸಿದ್ದಯ್ಯನಕೋಟೆ | 40670302038221 | 45,808-00 |

**ಶಾಖೆ: ದಾಗಿನಕಟ್ಟೆ, ಚನ್ನಗಿರಿ ತಾ||. ದಾವಣಗೆರೆ ಜಿಲ್ಲೆ. ಮೊ: 8073923518**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಹದಡಿ ಶೇಖರಪ್ಪ ಬಿನ್.ಭರಮಪ್ಪ, ದಾಗಿನಕಟ್ಟೆ | 40915302059920 | 74,727-40 |
| 2 | ಶ್ರೀ ಮಂಜಪ್ಪ ಬಿನ್. ಹನುಮಂತಪ್ಪ, ದಾಗಿನಕಟ್ಟೆ | 40915302051120 | 1,04,645-40 |
| 3 | ಶ್ರೀಮತಿ ನೇತ್ರಮ್ಮ ಕೋಂ. ವಿಜಯ್, ದಾಗಿನಕಟ್ಟೆ | 40915302032720 | 19,612-00 |
| 4 | ಶ್ರೀ ಪ್ರಭು ಟಿ.ಆರ್. ಬಿನ್. ರಂಗಪ್ಪ, ನಿಲೋಗಲ್ಲು | 40915302007720 | 23,822-00 |

**ಶಾಖೆ: ಚಿರಡೋಣಿ, ಚನ್ನಗಿರಿ ತಾ||, ದಾವಣಗೆರೆ ಜಿಲ್ಲೆ. ಮೊ: 7019873462**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ರುದ್ರಸ್ವಾಮಿ ಬಿನ್. ಶಿವಲಿಂಗಯ್ಯ, ಕೋಟೆಹಾಳ್ | 40895302062320 | 1,50,916-00 |
| 2 | ಶ್ರೀಮತಿ ಶೀಲಮ್ಮ ಕೋಂ. ಪರಮೇಶ್ವರಪ್ಪ, ಚಿರಡೋಣಿ | 40895302071720 | 1,14,359-00 |
| 3 | ಶ್ರೀಮತಿ ಶೀಲಮ್ಮ ಕೋಂ. ಪರಮೇಶ್ವರಪ್ಪ, ಚಿರಡೋಣಿ | 40895302075920 | 29,860-00 |
| 4 | ಶ್ರೀಮತಿ ಶೀಲಮ್ಮ ಕೋಂ. ಪರಮೇಶ್ವರಪ್ಪ, ಚಿರಡೋಣಿ | 40895302072020 | 28,876-00 |
| 5 | ಶ್ರೀ ನಾಗರಾಜ ಎನ್.ವಿ. ಬಿನ್. ವೀರಪ್ಪ, ಚಿರಡೋಣಿ | 40895302076820 | 1,93,452-00 |
| 6 | ಶ್ರೀ ನಾಗರಾಜ ಎಸ್.ಬಿ. ಬಿನ್. ಬಸಪ್ಪ, ದಾವಣಗೆರೆ | 40895302014021 | 3,10,451-00 |

**ಶಾಖೆ: ಕಬ್ಬಳ, ಚನ್ನಗಿರಿ ತಾ||, ದಾವಣಗೆರೆ ಜಿಲ್ಲೆ. ಮೊ: 9036410410**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ನವೀನ್‌ಕುಮಾರ್ ಬಿನ್. ಶಿವಾನಾಯ್ಕ, ಕಬ್ಬಳ | 40893302057920 | 64,750-00 |
| 2 | ಶ್ರೀ ತಿಪ್ಪೇಶ್‌ನಾಯ್ಕ ಬಿನ್. ಸೂರ್ಯಾನಾಯ್ಕ, ಸೋಮ್ಲಾಪುರ ತಾಂಡ | 40893302071820 | 26,948-00 |
| 3 | ಶ್ರೀ ಆಂಜನೇಯ ಬಿನ್. ಹನುಮಂತಪ್ಪ, ಕರೇಕಟ್ಟೆ | 40893302074620 | 1,07,121-00 |
| 4 | ಶ್ರೀ ಆಂಜನೇಯ ಬಿನ್. ಹನುಮಂತಪ್ಪ, ಕರೇಕಟ್ಟೆ | 40893302077020 | 43,886-00 |
| 5 | ಶ್ರೀಮತಿ ನಿರ್ಮಲ ಕೋಂ. ತಿಪ್ಪಾನಾಯ್ಕ, ಕಬ್ಬಳ | 40893302074820 | 85,731-00 |
| 6 | ಶ್ರೀಮತಿ ಕೊಟ್ರಮ್ಮ ಕೋಂ. ರಾಮಪ್ಪ, ಕರೇಕಟ್ಟೆ | 40893302077720 | 58,776-00 |

**ಶಾಖೆ: ಸೊಕ್ಕೆ, ಜಗಳೂರು ತಾ||, ದಾವಣಗೆರೆ ಜಿಲ್ಲೆ. ಮೊ: 9448653121, 8197981674**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಚನ್ನಬಸಪ್ಪ ಬಿನ್. ಬಸವರಾಜಪ್ಪ, ಗುಡಿಮಾಕುಂಟೆ | 40821302050020 | 62,401-00 |
| 2 | ಶ್ರೀಮತಿ ಬಸಮ್ಮ ಕೋಂ. ಅಜ್ಜಯ್ಯ, ಚಿಕ್ಕಉಜ್ಜಿನಿ | 40821302050320 | 71,146-00 |
| 3 | ಶ್ರೀ ಬಸವರಾಜ ಬಿನ್. ಅಲ್ಯೆಪ್ಪ, ಗುಡಿಮಾಕುಂಟೆ | 40821302051321 | 1,33,938-00 |
| 4 | ದುರ್ಗಮ್ಮ ಬಿನ್. ಗಂಗಮ್ಮ, ಚಿಕ್ಕಉಜ್ಜಿನಿ | 40821302029521 | 17,835-00 |
| 5 | ಶ್ರೀ ಭೋಜಪ್ಪ ಬಿನ್. ಕಿಟ್ಟಮ್ಮ, ಸೊಕ್ಕೆ | 40821302050121 | 39,000-00 |

**ಶಾಖೆ: ಚನ್ನಗಿರಿ, ಚನ್ನಗಿರಿ ತಾ||, ದಾವಣಗೆರೆ ಜಿಲ್ಲೆ. ಮೊ: 9845344592**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಹನುಮಂತಪ್ಪ ಹೆಚ್. ಬಿನ್. ಹನುಮ ಭೋವಿ, ಬೆಂಕಿಕೆರೆ | 40570302061321 | 13,546-00 |
| 2 | ಶ್ರೀ ಎಂ.ಆರ್. ಮಹೇಶ್ವರಪ್ಪ ಬಿನ್. ರುದ್ರಪ್ಪ, ಮೆದುಗೊಂಡನಹಳ್ಳಿ | 40570302003022 | 90,994-00 |
| 3 | ಶ್ರೀ ಎಂ.ಆರ್. ಮಹೇಶ್ವರಪ್ಪ ಬಿನ್. ರುದ್ರಪ್ಪ, ಮೆದುಗೊಂಡನಹಳ್ಳಿ | 40570302003122 | 1,13,237-00 |
| 4 | ಶ್ರೀ ಎಂ.ಆರ್. ಮಹೇಶ್ವರಪ್ಪ ಬಿನ್. ರುದ್ರಪ್ಪ, ಮೆದುಗೊಂಡನಹಳ್ಳಿ | 40570302094620 | 1,16,485-00 |
| 5 | ಶ್ರೀ ಮಾಲತೇಶ ಆರ್. ಬಿನ್. ರಾಮಪ್ಪ ಸಿ., ನಂ. 61, ಕಣದಸಾಲು ಬಡಾವಣೆ, ಚನ್ನಗಿರಿ. | 40570302087220 | 84,263-00 |
| 6 | ಶ್ರೀ ಮೈಲಾರಪ್ಪ ಎನ್. ಬಿನ್. ನೀಲಪ್ಪ, ಉಪ್ಪಾರಬೀದಿ, ಚನ್ನೇಶ್‌ಪುರ | 40570302073320 | 1,58,302-00 |
| 7 | ಶ್ರೀಮತಿ ಶೃತಿ ಕೋಂ. ಶಿವಕುಮಾರ್, ಕಗತೂರು, ಚನ್ನಗಿರಿ | 40570302074420 | 79,049-00 |
| 8 | ಶ್ರೀಮತಿ ಶೃತಿ ಕೋಂ. ಶಿವಕುಮಾರ್, ಕಗತೂರು, ಚನ್ನಗಿರಿ | 40570302100720 | 21,920-00 |
| 9 | ಶ್ರೀ ತಿಮ್ಮಪ್ಪ ಬಿನ್. ಹನುಮಂತಪ್ಪ, ಅಜ್ಜಿಹಳ್ಳಿ | 40570302054021 | 74,319-00 |
| 10 | ಶ್ರೀ ತಿಮ್ಮಪ್ಪ ಬಿನ್. ಹನುಮಂತಪ್ಪ, ಅಜ್ಜಿಹಳ್ಳಿ | 40570302062921 | 69,187-00 |

**ಶಾಖೆ: ಹೊಸಕೆರೆ, ಜಗಳೂರು ತಾ||, ದಾವಣಗೆರೆ ಜಿಲ್ಲೆ. ಮೊ: 9538614184, 9113695395**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಮಹೇಶ್‌ನಾಯ್ಕ ಬಿನ್. ಪ್ರಕಾಶ್‌ನಾಯ್ಕ, ವೆಂಕಟೇಶಪುರ | 40657302007320 | 80,936-00 |
| 2 | ಶ್ರೀಮತಿ ಸುವರ್ಣಮ್ಮ ಕೋಂ. ತಂಬಾಲಪ್ಪ, ಲಕ್ಕಂಪುರ | 40657302012520 | 17,550-00 |
| 3 | ಶ್ರೀ ಗುರುಮೂರ್ತಿ ಟಿ.ಆರ್. ಬಿನ್. ಈರಣ್ಣ, ಗೌಡಗೊಂಡನಹಳ್ಳಿ | 40657302018620 | 69,047-00 |
| 4 | ಶ್ರೀ ಮಂಜುನಾಥ ಬಿ. ಬಿನ್. ವಿರುಪಣ್ಣ, ಗೌರಿಪುರ | 40657302025920 | 11,131-00 |
| 5 | ಶ್ರೀ ಮಂಜುನಾಥ ಬಿ. ಬಿನ್. ವಿರುಪಣ್ಣ, ಗೌರಿಪುರ | 40657302026020 | 36,990-00 |
| 6 | ಶ್ರೀ ಸಿದ್ಧೇಶ ಕೆ.ಎಸ್. ಬಿನ್. ಕಡರಪ್ಪ, ಚಿಕ್ಕಬನ್ನಿಹಟ್ಟಿ | 40657302026120 | 14,465-00 |
| 7 | ಶ್ರೀ ಸತೀಶ ನಾಯ್ಕ ಬಿನ್. ರಾಮಾನಾಯ್ಕ, ವೆಂಕಟೇಶಪುರ | 40657302031120 | 71,638-00 |
| 8 | ಶ್ರೀ ಕುಮಾರಸ್ವಾಮಿ ಟಿ.ಹೆಚ್. ಬಿನ್. ಹನುಮಂತಪ್ಪ, ಹೊಸಕೆರೆ | 40657302030520 | 28,795-00 |
| 9 | ಶ್ರೀಮತಿ ರಾಯಮ್ಮ ಕೋಂ. ಈರಮ್ಮ, ಕೊಳಗೋಟೆ | 40657302030320 | 1,68,770-00 |
| 10 | ಶ್ರೀಮತಿ ರೇಣುಕಮ್ಮ ಕೋಂ. ಮೈಲಾರಪ್ಪ, ಹೊಸಕೆರೆ | 40657302030720 | 22,023-00 |
| 11 | ಶ್ರೀ ದೇವೇಂದ್ರಪ್ಪ ಕೆ.ಎಸ್. ಬಿನ್. ಸಣ್ಣಬಸಪ್ಪ, ಗೌಡಗೊಂಡನಹಳ್ಳಿ | 40657302031520 | 82,651-00 |

**ಶಾಖೆ: ಕುಂದೂರು, ಹೊನ್ನಾಳಿ ತಾ||, ದಾವಣಗೆರೆ ಜಿಲ್ಲೆ. ಮೊ: 9845769699**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ರೇವಣಸಿದ್ದಪ್ಪ ಎಸ್.ಬಿ. ಬಿನ್. ಬಸವನಗೌಡ, ಕೂಲಂಬಿ | 40943302095621 | 1,06,248-00 |
| 2 | ಶ್ರೀಮತಿ ಶೃತಿ ಕೆ.ಎಂ. ಕೋಂ. ಸಿದ್ದಾಚಾರಿ ಕೆ.ಎಸ್., ಮುಕ್ತೇನಹಳ್ಳಿ | 40943302047720 | 3,75,871-00 |
| 3 | ಶ್ರೀ ರಾಜಶೇಖರಪ್ಪ ಬಿನ್. ರಾಮಪ್ಪ ಓ. ಕುಂದೂರು | 40943302036421 | 54,261-00 |
| 4 | ಶ್ರೀ ಚಂದುಗೌಡ ಜಿ. ಬಿನ್. ಸಿದ್ದನಗೌಡ, ಕುಂದೂರು | 40943302098521 | 33,000-00 |
| 5 | ಶ್ರೀ ಮಹಮ್ಮದ್ ಜಬ್ಬೀರ್ ಬಿನ್. ಅಬ್ದುಲ್ ಜಿ., ಕುಂದೂರು | 40943302063220 | 36,379-00 |
| 6 | ಶ್ರೀ ಮಹಮ್ಮದ್ ಜಬ್ಬೀರ್ ಬಿನ್. ಅಬ್ದುಲ್ ಜಿ., ಕುಂದೂರು | 40943302069220 | 25,189-00 |
| 7 | ಶ್ರೀ ಖಾಲಿಂಖಾನ್ ಬಿನ್. ನಬೀಸಾಬ್, ಕುಂದೂರು | 40943302013521 | 17,443-00 |

**ಶಾಖೆ: ಬೆನಕನಹಳ್ಳಿ, ಹೊನ್ನಾಳಿ ತಾ||, ದಾವಣಗೆರೆ ಜಿಲ್ಲೆ. ಮೊ: 9008991048**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಮಂಜಪ್ಪ ಬಿನ್. ದುಂಡ್ಯೆಪ್ಪ, ಬೆನಕನಹಳ್ಳಿ | 40554302008720 | 55,470-00 |
| 2 | ಶ್ರೀ ಕುಮಾರ ಹೆಚ್.ಜಿ. ಬಿನ್. ರಾಜಪ್ಪ ಹೆಚ್.ಜಿ., 47, ಚಿಕ್ಕಬಾಸೂರು, ಹೊನ್ನಾಳಿ. | 40554302008370 | 2,24,900-00 |
| 3 | ಶ್ರೀ ಲಚ್ಮಾನಾಯ್ಕ ಬಿನ್. ಚಳ್ಯಾನಾಯ್ಕ, ಚಿಕ್ಕಬಾಸೂರು ತಾಂಡ, ಹೊನ್ನಾಳಿ. | 55415302006218 | 66,750-00 |
| 4 | ಶ್ರೀ ಲಚ್ಮಾನಾಯ್ಕ ಬಿನ್. ಚಳ್ಯಾನಾಯ್ಕ, ಚಿಕ್ಕಬಾಸೂರು ತಾಂಡ, ಹೊನ್ನಾಳಿ. | 55415302048918 | 16,200-00 |
| 5 | ಶ್ರೀಮತಿ ಬೆಂಕಮ್ಮ ಬಿ.ಕೆ. ಕೋಂ. ಸೋಮಶೇಖರಪ್ಪ, ಬೆನಕನಹಳ್ಳಿ | 55415302038618 | 42,000-00 |
| 6 | ಶ್ರೀಮತಿ ಬೆಂಕಮ್ಮ ಬಿ.ಕೆ. ಕೋಂ. ಸೋಮಶೇಖರಪ್ಪ, ಬೆನಕನಹಳ್ಳಿ | 55415302038318 | 69,000-00 |
| 7 | ಶ್ರೀ ಪಕ್ಕೀರನಾಯ್ಕ ಬಿನ್. ಲಿಂಗ್ಯಾನಾಯ್ಕ, ಗೊಂಟ್ಯಾಪುರ. | 40554302040021 | 1,06,675-00 |

ದಿನಾಂಕ : 04-03-2022 ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್

ಸ್ಥಳ : ದಾವಣಗೆರೆ ಪ್ರಾದೇಶಿಕ ಕಛೇರಿ,ದಾವಣಗೆರೆ.

# ಹೋಲಿಕೆ ಇಲ್ಲದ ಗಾಯಕಿ ಲತಾ ಮಂಗೇಶ್ಕರ್

## ನಗರದಲ್ಲಿ ಇಂದು ಲತಾ ಮಂಗೇಶ್ವರ್ ಸ್ಮರಣಾರ್ಥ 'ಗಾತ ರಹೇ ಮೇರಾ ದಿಲ್' ಸಂಗೀತ ಸಂಜೆ ಕಾರ್ಯಕ್ರಮ



ಕವಿ ಸತ್ತರು ಕವಿತೆಗೆ ಸಾವಿಲ್ಲ, ಕಲಾವಿದ ಸತ್ತರೂ ಕಲೆಗೆ ಸಾವಿಲ್ಲ. ಶಿಲ್ಪಿ ಸತ್ತರೂ ಶಿಲೆಗೆ ಸಾವಿಲ್ಲ, ಸಂಗೀತಗಾರ ಸತ್ತರೂ ಸಂಗೀತಕ್ಕೆ ಸಾವಿಲ್ಲಿ ಎಂಬುದಕ್ಕೆ ಸತ್ಯ ಸಾಕ್ಷಿ ಅಂದರೆ ಗಾನ ಕೋಗಿಲೆ ಲತಾ ಮಂಗೇಶ್ಕರ್.

ಮಧ್ಯಪ್ರದೇಶದ ಇಂದೂರ್‌ನಲ್ಲಿ 28 ಸೆಪ್ಟೆಂಬರ್ 1929ರಲ್ಲಿ ಶಾಸ್ತ್ರೀಯ ಸಂಗೀತಗಾರರು ಹಾಗು ನಾಟಕಕಾರರೂ ಆಗಿದ್ದ ಪಂಡಿತ್ ದೀನಾನಾಥ್ ಮಂಗೇಶ್ಕರ್ ಮತ್ತು ಶೇವಂತಿ ಎಂಬ ದಂಪತಿಗೆ ಹಿರಿಯ ಮಗಳಾಗಿ ಲತಾ ಮಂಗೇಶ್ಕರ್ ಒಂದು ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿ, ಅಸಾಮಾನ್ಯ ಸಾಧನೆ ಮಾಡಿ ಎಂಟು ದಶಕಗಳ ಕಾಲ ದಣಿವರಿಯದೆ ತಮ್ಮ ಸುಮಧುರ ಕಂಠದಿಂದ ವಿಶ್ವದ ಕೋಟ್ಯಾಂತರ ಅಭಿಮಾನಿ ಕೇಳುಗರ ಹೃದಯ ಗೆದ್ದು, ಸಂತೋಷ ಪಡಿಸಿ ಲತಾ ಮಂಗೇಶ್ಕರ್ ಒಂದು ದೊಡ್ಡ ಇತಿಹಾಸವನ್ನೇ ಸೃಷ್ಟಿಸಿದರು. ಅವರ ವಯಸ್ಸು ಬದಲಾದರೂ ಮತ್ತು ಅವರ ದೇಹ ಬದಲಾದರೂ ಅವರ ದಿವ್ಯ ಕಂಠ ಬದಲಾಗಲಿಲ್ಲ. ಅವರ ತೊಂಭತ್ತನೇ ವಯಸ್ಸಿನಲ್ಲಿಯೂ ಸಹ ಅವರ ಕಂಠ ಮಾತ್ರ ಹದಿನೆಂಟರ ವಯಸ್ಸಿನವರಂತೆಯೇ ಇತ್ತು. ಚಿತ್ರರಂಗದಲ್ಲಿ ಸಾಂದರ್ಭಿಕವಾಗಿ ಒಬ್ಬ ಅಜ್ಜಿಯ ಧ್ವನಿ, ಮಗಳ ಧ್ವನಿ ಹಾಗೂ ಮೊಮ್ಮಗಳ ಧ್ವನಿಗೆ ಹೊಂದಿಕೊಳ್ಳುವಂತೆ ಹಾಡುವ ಕಲೆ ಹೊಂದಿದ್ದ ಏಕೈಕ ಗಾಯಕಿ ಎಂದರೆ ಲತಾ ಮಂಗೇಶ್ಕರ್. ಇದು ಅವರಿಗೆ ದೇವರು ಕೊಟ್ಟ ದೈವದತ್ತ ಕೊಡುಗೆಯಾಗಿತ್ತು.

ಸರಳ, ಸೌಮ್ಯ ಸ್ವಭಾವದವರಾದ ಲತಾ ಮಂಗೇಶ್ಕರ್ ಗಾಯನದಿಂದ ಅಷ್ಟೇ ದೊಡ್ಡವರಾಗಿರಲಿಲ್ಲ, ಅವರ ನಯ-ವಿನಯ, ಗಾಂಭೀರ್ಯ ನಡತೆಯಿಂದ ಮತ್ತು ಇತರರಿಗೆ ಗೌರವಿಸಿ, ಪ್ರೀತಿಸುವ ಮತ್ತು ಸ್ನೇಹತ್ವದ ವಿಚಾರಗಳಲ್ಲಿ ಅತೀ ದೊಡ್ಡವರಾಗಿದ್ದರು.

ತುಂಬಿದ ಕೊಡ ತುಳುಕುವುದಿಲ್ಲ ಎನ್ನುವ ಹಾಗೆ ಲತಾ ಮಂಗೇಶ್ಕರ್ ಒಬ್ಬ ಸರಳ ವ್ಯಕ್ತಿತ್ವದ ಗಾಯಕಿಯಾಗಿದ್ದರು. ಮೇಕಪ್ ಮತ್ತು ಆಡಂಬರದ ಬದುಕನ್ನು ಎಂದೂ ಬಯಸಿದವರಲ್ಲ ಮತ್ತು ಪ್ರಚಾರ ಪ್ರಿಯರಲ್ಲ, ಮಾಧ್ಯಮಗಳಿಂದ ದೂರವಿರುತ್ತಿದ್ದರು.

ಅವರು ಸಂಗೀತ ಕ್ಷೇತ್ರಕ್ಕೆ ಕಾಲಿಟ್ಟ ದಿನಗಳಲ್ಲಿ ಹಿಂದಿ ಚಿತ್ರ ಕ್ಷೇತ್ರದಲ್ಲಿ ನೂರ್ ಜಹಾನ್ ಮತ್ತು ಶಂಶಾದ್ ಬೇಗಂರವರಂತಹ ಗಾಯಕಿಯರು ಹೆಸರು ಮಾಡಿ ಆಳುತ್ತಿದ್ದರು. ಅಂತವರ ಎದುರು ಹಾಡಿ ಹೆಸರು ಮಾಡುವುದು ಸುಲಭವಲ್ಲ.

ಇವರ ಹಾಡಿನಿಂದಲೇ ಎಷ್ಟೋ ಚಿತ್ರಗಳು ಪ್ರಸಿದ್ಧಿ ಪಡೆದು ಜನಪ್ರಿಯತೆ ಗಳಿಸಿವೆ. ಸಿನಿಮಾ ಪ್ರೇಮಿಗಳಿಗೆ ಸಂಗೀತದ ಹುಚ್ಚಿನ ಅಲೆ ಎಬ್ಬಿಸಿ, ಸಂಗೀತದಲ್ಲಿ ಮಗ್ನರನ್ನಾಗಿ ಮಾಡುವ ಶಕ್ತಿ ಲತಾ ಮಂಗೇಶ್ಕರ್‌ರವರ ಕಂಠದಲ್ಲಿ ಅಡಗಿತ್ತು. ಇವರ ಗೀತೆಗಳನ್ನು ಕೇಳದ ಕಿವಿಗಳೇ ಇಲ್ಲ. ಸೋಲದ ಮನಸ್ಸುಗಳೇ ಇಲ್ಲ, ಜನಪ್ರಿಯ ಗೀತೆಗಳು ಲೆಕ್ಕವೇ ಇಲ್ಲ. 'ಏ ಮೇರೆ ವತನ್ ಲೋಗೋ' ಹಾಡು ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರು ಅವರು ಕಣ್ಣೀರು ಹಾಕುವಂತೆ ಮಾಡಿತ್ತು. 'ಆಯೇಗಾ ಆನ್ನೇವಾಲಾ' ಗೀತೆ ಅವರ ವೃತ್ತಿ ಜೀವನದಲ್ಲೇ ಸೂಪರ್‌ಹಿಟ್ ಆಗಿದೆ. 'ಬೀಸ್ ಸಾಲ್ ಬಾದ್' ಚಿತ್ರದ 'ಕಹಿ ದೀಪ್ ಜಲೇ', 'ತುಮ್ಹೀ ಮೇರೆ ಮಂದಿರ್', 'ಪ್ಯಾರ್ ಕಿಯಾ ತೂ ಡರ್ನಾಕ್ಯಾ?' 'ಸಂಗಮ್' ಚಿತ್ರದ 'ಓ ಮೇರೆ ಸನಂ', 'ಸತ್ಯಂ ಶಿವಂ ಸುಂದರಂ' ಹೀಗೆ ಸಹಸ್ರಾರು ಗೀತೆಗಳು ಸಂಗೀತ ಪ್ರೇಮಿಗಳ ಹೃದಯದಲ್ಲಿ ಇಂದಿಗೂ ಉಳಿದಿವೆ.

ಸಂಗೀತ ಕ್ಷೇತ್ರದಲ್ಲಿ ಲತಾ ಮಂಗೇಶ್ಕರ್ ಹೀಗೆ ಬೆಳೆದು 'ಭಾರತ ರತ್ನ', 'ದಾದಾ ಸಾಹೇಬ್ ಪಾಲ್ಕೆ' 'ಪದ್ಮವಿಭೂಷಣ', 'ಗಾನ ಕೋಗಿಲೆ', 'ಭಾರತ ಕುವರಿ' ಪ್ರಶಸ್ತಿಗಳಿಗೆ ಗೌರವ ಪಾತ್ರರಾದರು.

ಐಫಾ ಪ್ರಶಸ್ತಿ ಮತ್ತು ಫಿಲಂ ಫೇರ್ ಪ್ರಶಸ್ತಿಗಳಂತೂ ಲೆಕ್ಕವೇ ಇಲ್ಲ. ಸಂಗೀತ ಲೋಕದಲ್ಲಿ ಸಂಗೀತ ಸಂಪತ್ತಿನ ಸಾಮ್ರಾಜ್ಯವನ್ನೇ ನಿರ್ಮಿಸಿದ ಹೋಲಿಕೆ ಇಲ್ಲದ ಗಾಯಕಿ ಲತಾ ಮಂಗೇಶ್ಕರ್.

ಹಿಂದಿ ಚಿತ್ರರಂಗದ ದಿಗ್ಗಜ ಗಾಯಕರುಗಳಾದ ಮಹಮದ್ ರಫೀ ಅವರ ಜೊತೆ 440 ಗೀತೆಗಳು, ಕಿಶೋರ್‌ಕುಮಾರ್ ಜೊತೆ 327 ಗೀತೆಗಳು, ಮುಖೇಶ್ ಜೊತೆ 161 ಗೀತೆಗಳು, ಮನ್ನಡ ಜೊತೆ 107 ಗೀತೆಗಳು ಅವರ ಸಹೋದರಿ ಆಶಾ ಭೋಂಸ್ಲೆ ಜೊತೆ 74 ಗೀತೆಗಳನ್ನು ಹಾಡಿದ್ದಾರೆ. ಪ್ರೀತಿ, ಪ್ರೇಮ, ಉಲ್ಲಾಸ, ವಿಷಾದದ ಕಠಿಣ ಗೀತೆಗಳನ್ನು ಲೀಲಾಜಾಲವಾಗಿ ಎಲ್ಲ ಪ್ರಮುಖ ನಟಿಯರ ಅಭಿನಯ ಮತ್ತು ಧ್ವನಿಯ ಏರಿಳಿತದ ಮೂಲಕ ಅವರ ಹಾಡಿನ ಭಾವ, ಭಾವನೆಯಿಂದ ಕೇಳುಗರ ಹೃದಯ ಸ್ಪರ್ಶವಾಗುವಂತೆ, ಮೈಮರೆಯುವಂತೆ ಹಾಡುತ್ತಿದ್ದರು. ಹೀಗೆ ಸಂಗೀತ ಕ್ಷೇತ್ರಕ್ಕೆ ಲತಾ ಮಂಗೇಶ್ಕರ್ ನೀಡಿದ ಕೊಡುಗೆ ಅಪಾರ.

ಒಂದು ಹಾಡು ಹೆಸರು ಮಾಡಬೇಕೆಂದರೆ ಸಂಗೀತಗಾರ ಎಷ್ಟು ಮುಖ್ಯನೋ ಸಂಗೀತ ನಿರ್ದೇಶಕ ಹಾಗೂ ಸನ್ನಿವೇಶಕ್ಕೆ ತಕ್ಕ ಸಾಹಿತಿಯ ಸಾಹಿತ್ಯ ಅಷ್ಟೇ ಮುಖ್ಯ. ಭಾರತದ ಹೆಸರಾಂತ ಹಿನ್ನೆಲೆ ಸಂಗೀತ ನಿರ್ದೇಶಕರಾದ ಲಕ್ಷ್ಮಿ ಕಾಂತ್ ಪ್ಯಾರೆಲಾಲ್ 696 ಗೀತೆಗಳನ್ನು, ಶಂಕರ್ ಜೈ ಕಿಶನ್ ಜೀ 453 ಗೀತೆಗಳನ್ನು, ಆರ್.ಡಿ. ಬರ್ಮನ್ 331 ಗೀತೆಗಳನ್ನು ಕಲ್ಯಾಣ ಜಿ. ಆನಂದ್ ಜಿ. 302 ಗೀತೆಗಳನ್ನು ಲತಾ ಮಂಗೇಶ್ಕರ್‌ರವರು ಖ್ಯಾತ ಸಂಗೀತ ನಿರ್ದೇಶಕರ ಜೊತೆ ಸಂಯೋಜಿಸಿ ಹಾಡಿದ್ದಾರೆ. ಒಟ್ಟು 36 ಭಾಷೆಗಳಲ್ಲಿ 30,000 ಹಾಡುಗಳನ್ನು ಹೇಳಿ ಗಿನ್ನಿಸ್ ದಾಖಲೆ ಮಾಡಿ ಭಾರತದ ಇತಿಹಾಸ ಪುಟ ಸೇರಿದ್ದಾರೆ. ಈ ಭೂಮಿಗೆ ಒಬ್ಬನೇ ಚಂದ್ರನು ಮತ್ತು ಒಬ್ಬನೇ ಸೂರ್ಯನೋ ಹಾಗೆ ಈ ಭೂಮಿ ಮೇಲೆ ಲತಾ ಮಂಗೇಶ್ಕರ್ ಒಬ್ಬರೇ ಗಾಯಕಿ ಎಂದರೆ ತಪ್ಪಾಗಲಾರದು.



**ಹೆಚ್.ವಿ. ಮಂಜುನಾಥಸ್ವಾಮಿ**
**ಮೊ: 98448 82366**

## ಪೊಲೀಸ್ ಅಧಿಕಾರಿ ಓಬಳೇಶ್ ನಾಯಕ್, ದೇವೇಂದ್ರಪ್ಪ ನಿವೃತ್ತಿ



ದಾವಣಗೆರೆ, ಮಾ.4- ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಆಜಾದ್ ನಗರ ಠಾಣೆಯ ಪಿಎಸ್‌ಐ ಓಬಳೇಶ್ ನಾಯಕ್ ಹಾಗೂ ಕೆಟಿಜೆ ನಗರ ಠಾಣೆಯ ಎಎಸ್‌ಐ ದೇವೇಂದ್ರಪ್ಪ ಅವರುಗಳನ್ನು ಜಿಲ್ಲಾ ಪೊಲೀಸ್ ವತಿಯಿಂದ ಬೀಳ್ಕೊಡಲಾಯಿತು. ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್ ಅವರು ನಿವೃತ್ತರಾದ ಅಧಿಕಾರಿಗಳಿಗೆ ಇಂದು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಅಭಿನಂದಿಸಿ, ಸನ್ಮಾನಿಸಿ, ನಿವೃತ್ತಿ ಜೀವನಕ್ಕೆ ಶುಭ ಕೋರಿದರು.

## ದೇವಾಲಯಗಳಿಗೆ ಸ್ವಾಯತ್ತತೆ ನೀಡಲು ಕಾನೂನು

ಬೆಂಗಳೂರು, ಮಾ.4 - ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ದೇವಾಲಯಗಳಿಗೆ ಸ್ವಾಯತ್ತತೆ ನೀಡಿ ಅಭಿವೃದ್ಧಿ ಕಾಮಗಾರಿಗಳ ವಿವೇಚನೆಯನ್ನು ದೇವಾಲಯಗಳಿಗೆ ಪ್ರತ್ಯೋಜಿಸಲು ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಇಂದು ತಾವು ಮಂಡಿಸಿದ 2022-23ನೇ ಸಾಲಿನ ಬಜೆಟ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿರುವ ಅವರು ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಿಗೊಳಿಸಬೇಕೆಂಬ ಬೇಡಿಕೆ ಬಹುಕಾಲದಿಂದ ಕೇಳಿಬರುತ್ತಿತ್ತು.

ಭಕ್ತಾದಿಗಳ ಬೇಡಿಕೆಯನ್ನು ಪರಿಗಣಿಸಿ, ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯ ಸ್ವಾಯತ್ತತೆ ನೀಡಲು ತೀರ್ಮಾನಿಸಲಾಗಿದೆ ಎಂದು ಅವರು ಹೇಳಿದರು. ಈ ಇಲಾಖೆ ವ್ಯಾಪ್ತಿಯಲ್ಲಿರುವ ದೇವಾಲಯಗಳ ಅರ್ಚಕರ, ಆಗಮಿಕರ ನೌಕರರಿಗೆ ನೆರವಾಗಲು ತಸ್ತೀಕ್ ಮೊತ್ತವನ್ನು 48 ಸಾವಿರ ರೂ.ಗಳಿಂದ 60 ಸಾವಿರ ರೂ.ಗಳಿಗೆ ಹೆಚ್ಚಿಸಲಾಗುವುದು ಎಂದು ಹೇಳಿದ್ದಾರೆ. ದೇವಾಲಯಗಳ ಸೇವೆಗಳನ್ನು ಭಕ್ತಾದಿಗಳಿಗೆ ಆನ್ ಲೈನ್ ಮುಖಾಂತರ ಲಭ್ಯ ಪಡಿಸಲು ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಅವರು ಹೇಳಿದರು.

## ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ವಿಶೇಷ ಪೂಜೆಗಳು

ದಾವಣಗೆರೆ - ಹಳೇ ಕುಂದುವಾಡದ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 8 ರವರೆಗೆ ವಿಶೇಷ ಪೂಜೆಗಳು ನಡೆಯಲಿದ್ದು, ದಿನಾಂಕ 9ರಂದು ಪಳ್ಳಾರ ಪ್ರಸಾದ ನಡೆಯುವುದು.

## ಸಿಎಂ ಬೊಮ್ಮಾಯಿ ಚೊಚ್ಚಲ ಬಜೆಟ್ ನಿರಾಶಾದಾಯಕ



ದಾವಣಗೆರೆ, ಮಾ.4- ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಚೊಚ್ಚಲ ಬಜೆಟ್ ಮಂಡನೆ ನಿರಾಶಾದಾಯಕವಾಗಿದೆ. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿಲ್ಲ. ಇದೊಂದು ಜನವಿರೋಧಿ ಬಜೆಟ್ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಟೀಕಿಸಿದ್ದಾರೆ.

ದಾವಣಗೆರೆಗೆ ವಿಮಾನ ನಿಲ್ದಾಣ ಸ್ಥಾಪನೆ ಕಾರ್ಯ ಸಾಧುವೇ ಎಂಬ ಬಗ್ಗೆ ವರದಿ ಮಾಡಲು ಬಜೆಟ್‌ನಲ್ಲಿ ಘೋಷಿಸಿರುವುದು ಹಾಸ್ಯಾಸ್ಪದ. ವಿಮಾನ ನಿಲ್ದಾಣ ಸ್ಥಾಪನೆಗೆ ನೂರಾರು ಎಕರೆ ಜಮೀನು ಬೇಕಾಗುತ್ತದೆ. ಆದರೆ ವಿಮಾನ ನಿಲ್ದಾಣಕ್ಕಾಗಿ ಒಂದಿಂಚೂ ಜಾಗವನ್ನು ಗುರುತಿಸದ ರಾಜ್ಯ ಸರ್ಕಾರ ವಿಮಾನ ನಿಲ್ದಾಣ ಘೋಷಣೆ ಮಾಡಿರುವುದು ದಾವಣಗೆರೆ ಜನರಿಗೆ ಬಗೆದಿರುವ ದ್ರೋಹವಾಗಿದೆ.

4 ಬಾರಿ ಸಂಸದರಾಗಿರುವ ಜಿ.ಎಂ. ಸಿದ್ದೇಶ್ವರ ಅವರು ದಾವಣಗೆರೆಯ ಅಶೋಕ ಟಾಕೀಸ್ ರೈಲ್ವೆ ಗೇಟ್ ಸಮಸ್ಯೆಯನ್ನು ಬಗೆ ಹರಿಸಿಲ್ಲ. ಬಿಜೆಪಿಯವರು ದಾವಣಗೆರೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆ ಮಾಡುತ್ತಾರೆಂದು ನಂಬಿಕೊಂಡರೆ ದಾವಣಗೆರೆ ಜನರಿಗೆ ಜಾತ್ರೆಯಲ್ಲಿ ಸಿಗುವ ಮಕ್ಕಳು ಆಟವಾಡುವ ವಿಮಾನ ಗ್ಯಾರೆಂಟಿ ಎಂದು ಡಿ.ಬಸವರಾಜ್ ಲೇವಡಿ ಮಾಡಿದ್ದಾರೆ.

ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವಿದ್ದಾಗ ದಾವಣಗೆರೆ ಕಾಂಗ್ರೆಸ್ ನಾಯಕರಾದ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರ ಕೋರಿಕೆಯ ಮೇರೆಗೆ ಕೇಂದ್ರ ಕಾರ್ಮಿಕ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ನಿಟ್ಟುವಳ್ಳಿಯಲ್ಲಿರುವ ಕಾರ್ಮಿಕ ವಿಮಾ ಆಸ್ಪತ್ರೆಯನ್ನು ಉನ್ನತೀಕರಿಸಿ, ಬೇಕಾದ ಎಲ್ಲಾ ಸೌಲಭ್ಯಗಳನ್ನು ನೀಡಿದ್ದರು.

ಇದೀಗ ಅಲ್ಲಿ 50 ಬೆಡ್‌ಗಳ ಹೆಚ್ಚಳದ ಬಗ್ಗೆ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದೆ. ದಾವಣಗೆರೆ ಜನರಿಗಾಗಿ ಯಾವುದೇ ಹೊಸ ಕಾರ್ಯಕ್ರಮ ಘೋಷಣೆ ಮಾಡಿಲ್ಲ.

ದಾವಣಗೆರೆ ಜಿಲ್ಲೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ದ್ರೋಹ ಬಗೆದಿವೆ ಎಂದು ಅವರು ಬಿಜೆಪಿ ಸರ್ಕಾರವನ್ನು ಟೀಕಿಸಿದ್ದಾರೆ.

## ಆಶಾದಾಯಕ ಬಜೆಟ್ : ಶಿವನಗೌಡ



ದಾವಣಗೆರೆ, ಮಾ.4 - ಕೋವಿಡ್ ಆರ್ಥಿಕ ಬಿಕ್ಕಟ್ಟಿನ ಮಧ್ಯೆಯೂ ಜನಸಾಮಾನ್ಯರಿಗೆ ಹೊರೆ ಆಗದ ಬಜೆಟ್ ಅನ್ನು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ನೀಡಿದ್ದಾರೆ. ಕೃಷಿ, ನೀರಾವರಿ, ಕಾರ್ಮಿಕರು, ಬಡವರು, ಸರ್ವ ಸಮುದಾಯಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಜನಪರ ಆಯವ್ಯಯ ಮಂಡಿಸಿದ್ದಾರೆ

ಬೊಮ್ಮಾಯಿ ಅವರು ಸಿಎಂ ಆದ ಬಳಿಕ ಮಂಡನೆ ಮಾಡಿದ ಚೊಚ್ಚಲ ಬಜೆಟ್. ಕೋವಿಡ್‌ನಿಂದ ಆರ್ಥಿಕತೆ ಕುಸಿದಿತ್ತು. ಇದಕ್ಕೆ ಚೈತನ್ಯ ನೀಡುವ ಕೆಲಸವನ್ನು ಬಜೆಟ್ ನಲ್ಲಿ ಮಾಡಿದ್ದಾರೆ. ಆಶಾದಾಯಕ ಬಜೆಟ್ ಎಂಬುದರಲ್ಲಿ ಎರಡು ಮಾತಿಲ್ಲ. ರೈತರಿಗೆ ಬಂಪರ್ ಕೊಡುಗೆ ನೀಡಿದ್ದಾರೆ.

## ನಗರದಲ್ಲಿ ಮೂಳೆ ಸಾಂದ್ರತೆ ಪರೀಕ್ಷೆ

ಉಚಿತ ಮೂಳೆ ಸಾಂದ್ರತೆ ಪರೀಕ್ಷೆ ಮತ್ತು ಎಲ್ಲಾ ತರಹದ ನೋವುಗಳ ಚಿಕಿತ್ಸಾ ಶಿಬಿರವು ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಅನ್ವಯ ಆಯುರ್ವೇದ ಆಸ್ಪತ್ರೆಯಲ್ಲಿ ನಡೆಯಲಿದೆ.

ನಾಳೆ ಭಾನುವಾರ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ಮಕ್ಕಳ ಮತ್ತು ಸ್ತ್ರೀ ಸಂಬಂಧಿತ ರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಏರ್ಪಾಡಾಗಿದೆ. ನಾಡಿದ್ದು ದಿನಾಂಕ 7ರ ಸೋಮವಾರ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ಉಚಿತ ಉದರ ರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಜರುಗಲಿದೆ. ವಿವರಕ್ಕೆ ದೂರವಾಣಿ 252228, ಮೊ. 86186-42929 ರಲ್ಲಿ ಸಂಪರ್ಕಿಸಬಹುದು.

## ವೇತನ ಅನುದಾನ ಜಾರಿಗೆ ಆಗ್ರಹ

### ನಗರಕ್ಕೆ ಇಂದು ಪಾದಯಾತ್ರೆ

ದಾವಣಗೆರೆ, ಮಾ.4- ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ರದ್ದುಪಡಿಸಿ, ಹಿಂದಿನ ಸಿಬ್ಬಂದಿ ವೇತನ ಅನುದಾನ ಜಾರಿಗೊಳಿಸುವಂತೆ ಆಗ್ರಹಿಸಿ ಹುಬ್ಬಳ್ಳಿಯಿಂದ ಬೆಂಗಳೂರುವರೆಗೆ ಕೈಗೊಂಡಿರುವ ಪಾದಯಾತ್ರೆಯು ನಾಳೆ ದಿನಾಂಕ 5ರ ಶನಿವಾರ ನಗರಕ್ಕಾಗಮಿಸಲಿದೆ.

ಮಾ.1ರಂದು ಹುಬ್ಬಳ್ಳಿಯಿಂದ ಆರಂಭಗೊಂಡಿರುವ ಪಾದಯಾತ್ರೆಯನ್ನು ಮಾ.5ರಂದು ಬೆಳಗ್ಗೆ 10 ಗಂಟೆಗೆ ನಗರದ ಜಯದೇವ ವೃತ್ತದಲ್ಲಿ ಬರಮಾಡಿಕೊಳ್ಳಲಾಗುವುದು. ಇದೇ ವೇಳೆ ನಡೆಯುವ ಸಮಾವೇಶದಲ್ಲಿ ಪಾದಯಾತ್ರೆ ನೇತೃತ್ವ ವಹಿಸಿರುವ ಒಕ್ಕೂಟದ ರಾಜ್ಯ ಸಂಚಾಲಕ ಲೋಹಿತ್ ಕುಂಬಾರ್, ಸಹ ಸಂಚಾಲಕರಾದ ಸುರೇಶ್ ಪಲ್ಲೇದ, ರಮೇಶಗೌಡ ಪಾಟೀಲ್ ಭಾಗವಹಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಖಾಸಗಿ ಐಟಿಐ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಸವರಾಜ ಸಾಗರ್ ತಿಳಿಸಿದರು.

ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ರದ್ದುಪಡಿಸಿ, ಹಿಂದಿನ 1997ರ ಅನುದಾನ ಸಂಹಿತೆಯಂತೆ ಸಿಬ್ಬಂದಿ ವೇತನ ಅನುದಾನಕ್ಕಾಗಿ ಒತ್ತಾಯಿಸಿ ಕಳೆದ ಹಲವಾರು ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ, ಸರ್ಕಾರಗಳು ಸ್ಪಂದಿಸಿಲ್ಲ. ಕಳೆದ ಹಲವು ವರ್ಷಗಳಿಂದ ಖಾಸಗಿ ಐಟಿಐಗಳು ಸಾಕಷ್ಟು ಸಮಸ್ಯೆ ಎದುರಿಸುತ್ತಿವೆ. ಸರ್ಕಾರದ ನಿಯಮಾವಳಿಗಳು ಖಾಸಗಿ ಐಟಿಐಗಳನ್ನು ಮುಚ್ಚಿಸುವ ಹುನ್ನಾರದಂತೆ ಕಂಡುಬರುತ್ತಿವೆ. ಸಂಯೋಜನೆ ಹೊಂದಿ 10-15 ವರ್ಷಗಳಾದರೂ ನಮ್ಮ ಶೈಕ್ಷಣಿಕ ಸೇವೆ ಪರಿಗಣಿಸಿ, ಸರ್ಕಾರ ಯಾವುದೇ ಸಹಾಯಾನುದಾನ ನೀಡಲು ಮುಂದಾಗುತ್ತಿಲ್ಲ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾ ಮುಖಂಡರಾದ ಎನ್.ಸಿ. ನಿಜಗುಣ, ಫಜ್ಲುರ್ ರೆಹಮಾನ್, ಎಂ. ಕೆಂಚಮೂರ್ತಿ, ಹನುಮಂತರಾವ್ ಶಿಂಧೆ, ಚೈತನ್ಯ ಕುಮಾರ, ಹಾಲೇಶ ಮಾಳಗಿ, ಮಲ್ಲಿಕಾರ್ಜುನ ಸೇರಿದಂತೆ ಇತರರು ಇದ್ದರು.

# ನೆನೆಗುದಿಯ ನೀರಾವರಿ ಯೋಜನೆಗಳಿಗೆ 20 ಸಾವಿರ ಕೋಟಿ ರೂ.

### ಮೇಕೆದಾಟಿಗೆ 1,000 ಕೋಟಿ ರೂ., ಭದ್ರಾ ಮೇಲ್ದಂಡೆಗೆ 3,000 ಕೋಟಿ ರೂ.

ಬೆಂಗಳೂರು, ಮಾ. 4 - ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು 20,000 ಕೋಟಿ ರೂ.ಗಳನ್ನು ತಮ್ಮ ಮುಂಗಡ ಪತ್ರದಲ್ಲಿ ತೆಗೆದಿರಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೇಕೆದಾಟು ಸಮತೋಲನಾ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲು 1,000 ಕೋಟಿ ರೂ. ಅನುದಾನ ಒದಗಿಸಿದ್ದಾರೆ.

2022-23ನೇ ಸಾಲಿನ ಮುಂಗಡ ಪತ್ರವನ್ನು ವಿಧಾನಸಭೆಯಲ್ಲಿಂದು ಮಂಡಿಸಿದ ಮುಖ್ಯಮಂತ್ರಿ ಅವರು, ಎತ್ತಿನಹೊಳೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆಗಳಿಗೆ ತಲಾ 3,000 ಕೋಟಿ ರೂ.ಗಳನ್ನು, ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿಗೆ 5,000 ಕೋಟಿ ರೂ., ಕಳಸಾ ಮತ್ತು ಬಂಡೂರಿ ನಾಲಾ ತಿರುವು ಯೋಜನೆಗೆ 1,000 ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ತೆಗೆದಿರಿಸಿದ್ದಾರೆ.

ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಕೇಂದ್ರ ಸರ್ಕಾರದ ಸಕ್ಷಮ ಪ್ರಾಧಿಕಾರಿಗಳ ತೀರುವಳಿಗಳನ್ನು ಪಡೆದು ಯೋಜನೆ ಅನುಷ್ಠಾನಗೊಳಿಸುವುದು ಶತಸಿದ್ಧ, ಇದಕ್ಕಾಗಿ 1,000 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದೇನೆ ಎಂದಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆ ಮಾನ್ಯತೆ ಪಡೆದು, ಕೇಂದ್ರದ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ ಚಿತ್ರದುರ್ಗ ಶಾಖಾ ಕಾಲುವೆಯ 60 ಕಿಲೋ ಮೀಟರ್‌ವರೆಗಿನ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಆಸುಪಾಸಿನ ಕೆರೆಗಳನ್ನು ಭರ್ತಿ ಮಾಡಿ 20,150 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಮಹತ್ವಾಕಾಂಕ್ಷಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಪ್ರಥಮ ಹಂತದ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ಪ್ರಾಯೋಗಿಕವಾಗಿ ಚಾಲನೆ ನೀಡಲಾಗುವುದು.

ಈ ಯೋಜನೆಯ 2ನೇ ಹಂತದ 260 ಕಿಲೋ ಮೀಟರ್ ಉದ್ದದ ಗುರುತ್ವ ಕಾಲುವೆ ಕಾಮಗಾರಿ ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಿ ಮುಂದಿನ ವರ್ಷದ ಮುಂಗಾರು ಹಂಗಾಮಿನಲ್ಲಿ ನೀರು ಪೂರೈಸಲು ಕ್ರಮ ಜರುಗಿಸಲಾಗುವುದು.

ಹಂತ ಹಂತವಾಗಿ ಯೋಜನೆ ಕಾರ್ಯಗತಗೊಳಿಸಲು ಕ್ರಮಕೈಗೊಂಡು ಇದಕ್ಕಾಗಿ 3,000 ಕೋಟಿ ರೂ.ಗಳನ್ನು ಮೀಸಲಿರಿಸಿದ್ದೇನೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ತುಂಗಭದ್ರಾ ಜಲಾಶಯಕ್ಕೆ ನವಿಲೆ ಬಳಿ ಸಮತೋಲನಾ ಜಲಾಶಯ ನಿರ್ಮಿಸಲು ಯೋಜನಾ ವರದಿ ಸಿದ್ಧಪಡಿಸಲಾಗಿದೆ.

ಈ ಪ್ರಸ್ತಾವನೆ ಕುರಿತು ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳೊಂದಿಗೆ ಸಮಾಲೋಚಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು, ಇದಕ್ಕಾಗಿ 1,000 ಕೋಟಿ ರೂ. ಒದಗಿಸಲಾಗಿದೆ. ರಾಜ್ಯದ ಕೆರೆಗಳ ಸಮಗ್ರ ಅಭಿವೃದ್ಧಿಯನ್ನು 500 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಕ್ರಿಯಾ ಯೋಜನೆ ರೂಪಿಸಲಾಗಿದೆ.

ಕೇಂದ್ರ ಸರ್ಕಾರದ ಭೂಜಲ ಯೋಜನೆಯನ್ನು, ಅತಿಯಾದ ಅಂತರ್ಜಲ ಬಳಕೆಯಿಂದಾಗಿ ನೀರಿನ ಸಮಸ್ಯೆ ಎದುರಿಸುತ್ತಿರುವ ರಾಜ್ಯದ 14 ಜಿಲ್ಲೆಗಳ 1199 ಗ್ರಾಮ ಪಂಚಾಯತ್‌ಗಳಲ್ಲಿ ಸಮುದಾಯ ಸಹಭಾಗಿತ್ವದೊಂದಿಗೆ ವೈಜ್ಞಾನಿಕ ಮತ್ತು ಸುಸ್ಥಿರ ಅಂತರ್ಜಲ ನಿರ್ವಹಣಾ ಪದ್ಧತಿಗಳ ಮೂಲಕ 1202 ಕೋಟಿ ರೂ. ಮೊತ್ತದಲ್ಲಿ ಅನುಷ್ಠಾಗೊಳಿಸುವುದಾಗಿ ಹೇಳಿದ್ದಾರೆ.

ಪ್ರಗತಿಯಲ್ಲಿರುವ 14 ನೀರಾವರಿ ಯೋಜನೆ ಪೂರ್ಣಗೊಳಿಸಿ, 35,319 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

2021-22ನೇ ಸಾಲಿನಲ್ಲಿ ಅನುಮೋದಿಸಿದ 8,774 ಕೋಟಿ ರೂ.ಗಳ ಹೊಸ ನೀರಾವರಿ ಯೋಜನೆಗಳಿಗೆ ರೂಪುರೇಷೆ ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

## ಇಂದು 'ಅತ್ತಿ ಹೂವು' ಕೃತಿ ಬಿಡುಗಡೆ

ದಾವಣಗೆರೆ, ಮಾ.4- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಾಳೆ ದಿನಾಂಕ 5ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಪ್ರೊ.ಓ. ನಾಗೇಂದ್ರಪ್ಪ ಅವರ ಆತ್ಮಕಥೆ 'ಅತ್ತಿ ಹೂವು' ಕೃತಿ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಾಹಿತಿ ಡಾ.ಎ.ಬಿ. ರಾಮಚಂದ್ರಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿ.ಪ. ಸದಸ್ಯ ಎಚ್.ವಿಶ್ವನಾಥ್ ಪುಸ್ತಕ ಬಿಡುಗಡೆಗೊಳಿಸುವರು. ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್ ಕೃತಿ ಪರಿಚಯಿಸುವರು. ಮುಖ್ಯ ಅತಿಥಿಗಳಾಗಿ ಕವಿ ಚಂದ್ರಶೇಖರ ತಾಳ್ಯ, ಮಿಲ್ಲತ್ ಸಂಸ್ಥೆ ಸಂಸ್ಥಾಪಕ ಸೈಯದ್ ಸೈಫುಲ್ಲಾ ಅತಿಥಿಗಳಾಗಿ ಭಾಗವಹಿಸುವರು. ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಲೇಖಕ ಓ. ನಾಗೇಂದ್ರಪ್ಪ, ಸಾಹಿತಿಗಳಾದ ದಿಳ್ಳೆಪ್ಪ, ರಾಜೇಂದ್ರ ಬಂಗೇರ, ರಾಘವೇಂದ್ರ ನಾಯರಿ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಜನತೆಗೆ ತೆರಿಗೆಯ ಹೊರೆ ಹೇರದ ಉತ್ತಮ ಬಜೆಟ್



ಕಳೆದ ಎರಡು ವರ್ಷಗಳಿಂದ ಕೋವಿಡ್ ಸಂಕಷ್ಟಕ್ಕೆ ಸಿಲುಕಿದ್ದ ಜನತೆಗೆ ಹೊಸ ತೆರಿಗೆಯನ್ನು ವಿಧಿಸದೇ ಎಲ್ಲರನ್ನೂ ಸಂತುಷ್ಟಗೊಳಿಸಿ ಹೊಸ ಚೈತನ್ಯ ಹೊಸ ಚಿಂತನೆ, ನವಕರ್ನಾಟಕ ನಿರ್ಮಾಣ ಮಾಡುವ ಪ್ರಸಕ್ತ ಸಾಲಿನ ಉತ್ತಮ ಬಜೆಟ್ ಇದಾಗಿದೆ. ಬಿಜೆಪಿ ಮೇಲ್ವರ್ಗದವರ ಪಕ್ಷ ಎಂಬ ಆರೋಪದಿಂದ ಮುಕ್ತವಾಗಿಸಲು ಕ್ರಿಶ್ಚಿಯನ್, ಮರಾಠ, ಲಿಂಗಾಯತ, ಒಕ್ಕಲಿಗ, ಹಿಂದುಳಿದ ವರ್ಗ ಸೇರಿದಂತೆ ಪ್ರತಿಯೊಂದು ಸಮುದಾಯಕ್ಕೂ ಬಂಪರ್ ಕೊಡುಗೆ ನೀಡುವ ಮೂಲಕ ಎಲ್ಲಾ ಸಮುದಾಯಗಳಿಗೂ ಸಮಾನತೆ ತೋರಿಸಲಾಗಿದೆ.

ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಪತ್ರಕರ್ತರಿಗೆ ಮಾಧ್ಯಮ ಕಿಟ್ ಹಾಗೂ ಹಿಂದುಳಿದ ವರ್ಗಗಳ ಪತ್ರಿಕೆಗಳಿಗೆ ಪ್ರತಿ ತಿಂಗಳು 2 ಪುಟ ಜಾಹೀರಾತು ನೀಡುವ ಕಾರ್ಯಕ್ರಮ ರೂಪಿಸಿರುವುದು ವಿಶೇಷ.

ವಿಶೇಷವಾಗಿ ದಾವಣಗೆರೆ ಜಿಲ್ಲೆಯಲ್ಲಿ ಪ್ರತ್ಯೇಕ ಹಾಲು ಒಕ್ಕೂಟ ನಿರ್ಮಾಣಕ್ಕೆ ಒತ್ತು, ಜಿಲ್ಲೆಗೆ ವಿಮಾನ ನಿಲ್ದಾಣ ಸ್ಥಾಪನೆಗೆ ಕಾರ್ಯ ಸಾಧ್ಯತಾ ವರದಿ ತಯಾರಿಗೆ ಒಪ್ಪಿರುವುದರಿಂದ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಹಾಗೂ ಮುಂದಿನ ದಿನಗಳಲ್ಲಿ ದಾವಣಗೆರೆ ಜಿಲ್ಲೆಗೆ ಪ್ರತ್ಯೇಕ ಸರ್ಕಾರಿ ಮೆಡಿಕಲ್ ಕಾಲೇಜ್ ಸ್ಥಾಪನೆಗೆ ಒತ್ತಾಯಿಸಲಾಗುವುದು.

**-ಕೆ. ಪ್ರಸನ್ನ ಕುಮಾರ್**
ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.

## ಭರವಸೆಗಳು ಅನುಷ್ಠಾನಗೊಳ್ಳಲಿ



ಶಿಕ್ಷಣ, ಉದ್ಯೋಗ, ಸಬಲೀಕರಣ ಎಂಬ 'ತ್ರೀ ಸೂತ್ರ' ಆಶಯಗಳೊಂದಿಗೆ ಮುಖ್ಯಮಂತ್ರಿಗಳು ಮಂಡಿಸಿದ ರಾಜ್ಯ ಬಜೆಟ್ ಮೇಲ್ನೋಟಕ್ಕೆ ಆಶಾದಾಯಕವಾಗಿದೆ.

ಶ್ರಮಿಕ ವರ್ಗದ ಕಡೆ ಕಣ್ಣು ಹಾಯಿಸಿದಂತಿದೆ. ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರು ಸೇರಿದಂತೆ ಇತರೆ ವರ್ಗದವರ ಗೌರವ ಧನ ತುಸು ಹೆಚ್ಚಳ ಮಾಡಲಾಗಿದೆ. ಕಟ್ಟಡ ಕಾರ್ಮಿಕರಿಗೆ, ಮಕ್ಕಳಿಗೆ ಬಸ್‌ಪಾಸ್, ಬೀದಿ ಬದಿ ವ್ಯಾಪಾರಿಗಳಿಗೂ ಅನುಕೂಲ ಮಾಡಲಾಗಿದೆ. ನೀರಾವರಿ ಯೋಜನೆಗೆ 10 ಸಾವಿರ ಕೋಟಿಗೂ ಹೆಚ್ಚು ಹಣ ಮೀಸಲಿಡಲಾಗಿದೆ. ಯಶಸ್ವಿನಿ ಯೋಜನೆ ಮರು ಜಾರಿಗೆ ತೀರ್ಮಾನಿಸಿರುವುದು ಗ್ರಾಮೀಣ ವಲಯಕ್ಕೆ ಸಂತಸದ ಸಂಗತಿ. ಪೆಟ್ರೋಲ್, ಡೀಸೆಲ್ ಮೇಲೆ ತೆರಿಗೆ ಹಾಕುವುದಿಲ್ಲ ಎಂದಿರುವುದು ಎಲ್ಲರನ್ನೂ ಸಂತೃಪ್ತಿ ಪಡಿಸುವ ಕೆಲಸವಾಗಿದೆ.

ದಾವಣಗೆರೆಗೆ ಪ್ರತ್ಯೇಕ ಹಾಲು ಒಕ್ಕೂಟ ಸ್ಥಾಪನೆ ಸ್ವಾಗತಾರ್ಹ, ಬಜೆಟ್‌ನ ಎಲ್ಲಾ ಭರವಸೆಗಳು ಭವಿಷ್ಯದಲ್ಲಿ ಅನುಷ್ಠಾನಗೊಳ್ಳುವ ಮೂಲಕ ರಾಜ್ಯವು ಪ್ರಗತಿಯತ್ತ ಮುನ್ನಡೆಯಲಿ ಎನ್ನುವುದೇ ನಮ್ಮ ಆಶಯ.

**-ಎಲ್.ಹೆಚ್.ಅರುಣ್‌ಕುಮಾರ್**, ಹಿರಿಯ ನ್ಯಾಯವಾದಿ

## ಕೆರೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು



ಮುಖ್ಯ ಮಂತ್ರಿಗಳು ಕೊಟ್ಟಿರುವ ಬಜೆಟ್ ಸರ್ವಸ್ಪರ್ಶಿ ಸರ್ವ ಜನಾಂಗಕ್ಕೂ ಅನುಕೂಲವಾಗುವಂತಹ ಬಜೆಟ್ ಇದಾಗಿದೆ. ರೈತರಿಗೆ ಅನುಕೂಲವಾಗುವ ನೀರಾವರಿ ಕೆರೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿ ರುವುದು ಸಂತೋಷದ ವಿಚಾರ. ದಾವಣಗೆರೆ- ಚಿತ್ರದುರ್ಗಕ್ಕೆ ಕೆಎಂಎಫ್ ಹೊಸ ಘಟಕವನ್ನು ಪ್ರಾರಂಭ ಮಾಡುವುದು ದಾವಣಗೆರೆಯಲ್ಲಿ ವಿಮಾನ ನಿಲ್ದಾಣ ಮಾಡುವು ದಕ್ಕೆ ಕಾರ್ಯ ಕ್ಷಮತೆಯ ವರದಿ ತಯಾರು ಮಾಡುವುದು ದಾವಣಗೆರೆಯಲ್ಲಿ ಎಸ್.ಡಿ.ಆರ್.ಎಫ್ ಸ್ಥಾಪನೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಜಿಲ್ಲೆಗೆ ನೀಡಿರುವುದರಿಂದ ಅವರಿಗೆ ಧನ್ಯವಾದಗಳು.

**- ಬಿ.ಎಸ್.ಜಗದೀಶ್**, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ

## ರಾಜ್ಯ ಬಜೆಟ್‌ಗೆ ಸ್ವಾಗತ



ಸಿಎಂ ಬಸವರಾಜ ಬೊಮ್ಮಾಯಿ ಅವರು ಇಂದು ಮಂಡಿಸಿರುವ ಬಜೆಟ್ ಅನ್ನು ಸ್ವಾಗತಿಸಿರುವ ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ಕಾರ್ಯದರ್ಶಿ ಜೆ. ಈಶ್ವರ ಸಿಂಗ್ ಕವಿತಾಳ, ಮದ್ಯದ ಉದ್ಯಮಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಸರ್ಕಾರ ಯಥಾಸ್ಥಿತಿಯನ್ನು ಮುಂದುವರೆಸಿದೆ ಎಂದು ಮುಖ್ಯಮಂತ್ರಿಗಳನ್ನು ಅಭಿನಂದಿಸಿದ್ದಾರೆ.

## ಬಜೆಟ್ ಜಿಲ್ಲೆಗೆ ನಿರಾಶಾದಾಯಕ



ಜಿಲ್ಲೆಯ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಗಾಗಿ ಕಾರ್ಖಾನೆಗಳು ಪ್ರಾರಂಭವಾಗಬಹುದು ಎಂಬ ನಿರೀಕ್ಷೆ ಹುಸಿ.

ವಿಮಾನ ನಿಲ್ದಾಣ ಎಂದು ಹೇಳಲಾಗುತ್ತಿದೆಯಾದರೂ ಇದು ದೀರ್ಘಾವಧಿಯ ಯೋಜನೆಯಾಗಿದ್ದು, ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೂ, ಜುಟ್ಟಿಗೆ ಮಲ್ಲಿಗೆ ಹೂವು ಎಂಬಂತೆ ಇದೆ ಈ ಯೋಜನೆ. ರೈತರ ಫಲವತ್ತಾದ ಭೂಮಿಯನ್ನು ಒತ್ತಾಯಪೂರ್ವಕವಾಗಿ ಸ್ವಾಧೀನ ಪಡೆಯಬಾರದು.

ರೈತರ ಅನುಮತಿಯ ಮೇರೆಗೆ ಉತ್ತಮ ಬೆಲೆ ನಿಗದಿ ಮಾಡಿ ರೈತರ ಭೂಮಿ ಖರೀದಿ ಮಾಡಬೇಕು ಹಾಗೂ ಭೂಮಿ ನೀಡುವ ರೈತರ ಕುಟುಂಬಕ್ಕೆ ಕನಿಷ್ಠ ಒಬ್ಬರಿಗೆ ಉದ್ಯೋಗ ನೀಡಬೇಕು.

**- ಕೆ.ಎಲ್. ಹರೀಶ್ ಬಸಾಪುರ**
ಜಿಲ್ಲಾಧ್ಯಕ್ಷ, ಕಾಂಗ್ರೆಸ್ ಸಾಮಾಜಿಕ ಜಾಲತಾಣ

# ನಗರದ ವಿವಿಧೆಡೆಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 04 ಗಂಟೆಯವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಶೇಖರಪ್ಪ ನಗರ ಮಸೀದಿ ಹಿಂಭಾಗ, ರಂಭಾಪುರಿ ರಸ್ತೆ, ಮಹಾವೀರ ಭವನ, ಆರ್‌ಎಮ್‌ಸಿ ಲಿಂಕ್ ರಸ್ತೆ, ಗುಜರಿ ಲೈನ್, ಬಂಬೂ ಬಜಾರ್, ಬಿ.ಟಿ ಲೇಔಟ್, ಎಲ್‌ಬಿಎಸ್ ನಗರ, ಆನೆಕೊಂಡ, ಇಮಾಂನಗರ, ಬಿಡಿಓ ಆಫೀಸ್, ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆ. ಆರ್. ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋ ಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸ ಮಸೀದಿ ಹಿಂಭಾಗ, ಬೀಡಿ ಲೇಔಟ್, ಆಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫ ನಗರ ಸ್ವಲ್ಪ ಭಾಗ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಕೆ.ಆರ್. ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್, ಜಗಳೂರು ರಸ್ತೆ, ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್. ಎಸ್. ಆಸ್ಪತ್ರೆ, ಅರಳೀಮರದ ಸರ್ಕಲ್, ಬೇತೂರ್ ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟರ್ಸ್ (ಬೇತೂರ್‌ರಸ್ತೆ) ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ, ಕೆ.ಆರ್. ರಸ್ತೆ, ಗಡಿಯಾರ ಕಂಬ, ಬಿ.ಟಿ. ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪಭಾಗ, ವಸಂತ ಟಾಕೀಸ್ ಸ್ವಲ್ಪಭಾಗ ಹಾಗೂ ಇತರೆ ಪ್ರದೇಶಗಳು.

ಹಗೇದಿಬ್ಬ ಸರ್ಕಲ್, ಗಾಂಧಿನಗರ, ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್.ಕೆ. ಪಿ. ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ದೇವರಾಜ್ ಅರಸ್ ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್.ಪಿ. ಆಫೀಸ್, ಆರ್. ಟಿ.ಓ. ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್.ಪಿ.ಎಸ್. ನಗರ 2 ನೇ ಹಂತ, ಎಸ್.ಎಮ್.ಕೆ. ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ ಹಾಗೂ ಟೀಚರ್ಸ್ ಕಾಲೋನಿ ಇತರೆ ಪ್ರದೇಶಗಳು.

ಭಾಷಾನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾವುಲ್ಲಾ ಮುಸ್ತಾಫ ನಗರ, ರಜಾಕ್ ಸರ್ಕಲ್, ಭಾಷಾ ನಗರ ಮುಖ್ಯರಸ್ತೆ, ಸುತ್ತಮುತ್ತ ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ್ ನಗರ, ಇ.ಎಸ್.ಐ. ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷನಗರ ಮುಖ್ಯ ರಸ್ತೆ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

# ಅಭಿವೃದ್ಧಿಯ ವಿರೋಧಿ, ದೂರದೃಷ್ಟಿ ಇಲ್ಲದ ಬಜೆಟ್

**(6ನೇ ಪುಟದಿಂದ)** ನಲ್ಲಿ ಇಟ್ಟಿರುವ ಹಣ ರೂ. 20,601 ಕೋಟಿ. ನಮ್ಮ ಬಜೆಟ್ ಗಾತ್ರ ರೂ. 2.02 ಲಕ್ಷ ಕೋಟಿ, ಈಗಿನ ಬಜೆಟ್ ಗಾತ್ರ ರೂ. 2.65 ಲಕ್ಷ ಕೋಟಿ. ಬಿಜೆಪಿಯವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನೀರಾವರಿಗೆ ಐದು ವರ್ಷಗಳಲ್ಲಿ ಒಂದೂವರೆ ಲಕ್ಷ ಕೋಟಿ ಖರ್ಚು ಮಾಡ್ತೀವಿ ಎಂದಿದ್ದರು. ಅಂದರೆ ಈ ವರ್ಷ ಕನಿಷ್ಠ ರೂ. 30,000 ಕೋಟಿಯಾದರೂ ಇಡಬೇಕಲ್ವ? ಈವರೆಗೆ ಬಿಜೆಪಿ ಸರ್ಕಾರ ಖರ್ಚು ಮಾಡಿರುವುದು ಸುಮಾರು ರೂ. 40,000 ಕೋಟಿ. ಈ ವರ್ಷದ 20,000 ಕೋಟಿ ರೂಪಾಯಿ ಸೇರಿಸಿದ್ರೂ ರೂ. 60,000 ಕೋಟಿ ಆಗುತ್ತೆ. ಸಾಕ? ಹಿಂದೆ ನಮ್ಮ ಸರ್ಕಾರ ಇದ್ದಾಗ ಗೋವಿಂದ ಕಾರಜೋಳ ನೀರಾವರಿ ಬಗ್ಗೆ ಭಾಷಣ ಮಾಡುವಾಗ ನೀರಾವರಿ ಕನಿಷ್ಠ ರೂ. 25,000 ಕೋಟಿ ಇಡಿ ಎನ್ನುತ್ತಿದ್ದರು. ಈಗ ಏನಂತಾರೆ ಎಂದು ಪ್ರಶ್ನಿಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ.ಪಿ / ಟಿ.ಎಸ್.ಪಿ ಯೋಜನೆಗೆ ನಾವು ಹಣ ಮೀಸಲಿಡುತ್ತಿದ್ದೆವು. ನಮ್ಮ ಸರ್ಕಾರದ ಕಡೇ ಬಜೆಟ್ ನಲ್ಲಿ ಈ ವರ್ಗದವರಿಗೆ ರೂ. 29,000 ಕೋಟಿಗೂ ಅಧಿಕ ಅನುದಾನ ನೀಡಲಾಗಿತ್ತು. ಬಿಜೆಪಿ ಸರ್ಕಾರ ನಾಲ್ಕು ವರ್ಷದ ನಂತರ ಕೂಡ ರೂ. 28,000 ಕೋಟಿಯಲ್ಲೇ ಇದೆ. ಬಜೆಟ್ ಗಾತ್ರ ಹೆಚ್ಚಾದಂತೆ ಈ ಯೋಜನೆಗೆ ನೀಡುವ ಹಣ ಕೂಡ ಹೆಚ್ಚಾಗಬೇಕು. ಈ ಸಲದ ಬಜೆಟ್‌ನಲ್ಲಿ ಕನಿಷ್ಟ ರೂ. 40,000 ಕೋಟಿ ಆದರೂ ಆಗಬೇಕಿತ್ತು. ಹಿಂದುಳಿದ ಜಾತಿಗಳ ಕಲ್ಯಾಣದ ಅನುದಾನ ಕಡಿಮೆಯಾಗಿದೆ, ಇನ್ನು ಅಲ್ಪಸಂಖ್ಯಾತರ ಹೆಸರೇ ಹೇಳದ ಬಿಜೆಪಿ ದೀನ್‌ದಯಾಳು ಉಪಾಧ್ಯಾಯ ಅವರ ಹೆಸರಿನಲ್ಲಿ ಸಾವಿರ ವಿದ್ಯಾರ್ಥಿಗಳ ಹಾಸ್ಟೆಲ್ ಮಾಡುವುದಾಗಿ ಹೇಳಿದ್ದಾರೆ, ಆದರೆ ಇದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ. 200 - 300 ಮಕ್ಕಳ ಹಾಸ್ಟೆಲ್ ಮಾಡಿದರೆ ಅದೇ ದೊಡ್ಡದು. ನಾಲ್ಕು ಕಡೆ ಸಾವಿರ ವಿದ್ಯಾರ್ಥಿಗಳ ಹಾಸ್ಟೆಲ್ ಮಾಡ್ತೀವಿ ಎಂದಿದ್ದಾರೆ, ಇದು ಅವಾಸ್ತವಿಕ ಮತ್ತು ಅಸಾಧ್ಯವಾದ ಕೆಲಸ ಎಂದಿದ್ದಾರೆ.

ಈಗ ರಾಜ್ಯದಲ್ಲಿರುವ ಬರಡು ದನಗಳನ್ನು ಗೋಶಾಲೆಗೆ ಕಳುಹಿಸಿದರೆ ಕನಿಷ್ಠ 500 ಗೋಶಾಲೆಗಳ ಅಗತ್ಯ ಇದೆ. ಇದನ್ನು ಮಾಡದಿದ್ದರೆ ಉತ್ತರ ಪ್ರದೇಶದಲ್ಲಿ ಆದಂತೆ ಬೀದಿ ಬೀದಿಯಲ್ಲಿ ದನಗಳು ಇರುತ್ತವೆ. ಪುಣ್ಯಕೋಟಿ ಹೆಸರಿನಲ್ಲಿ ಗೋವುಗಳನ್ನು ದತ್ತು ಪಡೆಯುವವರಿಗೆ ಸರ್ಕಾರ ರೂ. 11,000 ಕೊಡುವುದಾಗಿ ಹೇಳಿದೆ, ಈ ಹಣವನ್ನು ರೈತರಿಗೇ ಕೊಟ್ಟಿದ್ದರೆ ಅವರೇ ಸಾಕ್ತಿದ್ದರು. ಇದರಿಂದ ಜಾನುವಾರುಗಳ ಮಾಲೀಕರಾದ ರೈತರಿಗೆ ಅನ್ಯಾಯ ಆಗುತ್ತದೆ ಎಂದು ವಿಷಾದಿಸಿದ್ದಾರೆ.

## ರೈತಪರ ಕಾಳಜಿಯುಳ್ಳ ಬಜೆಟ್

**(6ನೇ ಪುಟದಿಂದ)** ಸಾಧ್ಯತಾ ವರದಿ ತಯಾರಿ ಸಲು ಸಮ್ಮತಿ ನೀಡುವ ಮೂಲಕ ನಿಲ್ದಾಣ ಸ್ಥಾಪನೆ ವಿಷಯದಲ್ಲಿ ಮೊದಲ ಹೆಜ್ಜೆ ಇಟ್ಟಂ ತಾಗಿದೆ.

ದಾವಣಗೆರೆ ಜಿಲ್ಲೆಗೆ, ಚಿತ್ರದುರ್ಗ - ದಾವಣಗೆರೆ ಸೇರಿ ಪ್ರತ್ಯೇಕ ಹಾಲು ಒಕ್ಕೂಟ ರಚನೆಗೆ ಸಮ್ಮತಿ ಸೂಚಿಸಿದ್ದಾರೆ. ಪ್ರಕೃತಿ ವಿಕೋಪದಲ್ಲಿ ಉಸ್ತುವಾರಿಗೆ ಎಸ್.ಡಿ.ಆರ್.ಎಫ್ ಅನ್ನು ದಾವಣಗೆರೆಯಲ್ಲಿ ಸ್ಥಾಪನೆ ಮಾಡುವುದಾಗಿ ಹೇಳಿದ್ದಾರೆ.

ಉಳಿದಂತೆ ಕೃಷಿ ಕಾಲೇಜು ದೊರೆತಿಲ್ಲ, ಮೆಕ್ಕೆಜೋಳ ಸಂಶೋಧನಾ ಕೇಂದ್ರದ ಭರವಸೆ ಇಟ್ಟುಕೊಳ್ಳಲಾಗಿತ್ತು, ಆದರೆ ಮೆಕ್ಕೆಜೋಳ ಸಂಶೋಧನಾ ಕೇಂದ್ರವನ್ನು ಹಿರೇಕೆರೂರಿನಲ್ಲಿ ತೆರೆಯುವ ಉದ್ದೇಶವನ್ನು ವ್ಯಕ್ತಪಡಿಸಿದ್ದಾರೆ,

ಕೇಂದ್ರದ ತಂಡ ರಾಜ್ಯದ ನಾಲ್ಕು ಕಡೆ ಭೇಟಿ ಮಾಡಿ ಕೇಂದ್ರಕ್ಕೆ ವರದಿ ನೀಡಿದೆ, ಕೇಂದ್ರ ಸಮಿತಿಯ ವರದಿ ಏನು ಹೇಳುತ್ತದೆಯೋ ಅದಕ್ಕೆ ನಾವು ಒಪ್ಪಲೇಬೇಕಾಗುತ್ತದೆ. ಒಟ್ಟಾರೆ ಯಾಗಿ ಎಲ್ಲಾ ವರ್ಗವನ್ನು ದೃಷ್ಟಿಯಲ್ಲಿಕೊಂಡು ಉತ್ತಮ ಬಜೆಟ್ಟನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ ಎಂದ ಸಂಸದರು ಹೇಳಿದ್ದಾರೆ.

## ವನಿತಾ ಸಮಾಜದಿಂದ ನಗರದಲ್ಲಿ ನಾಳೆ ಸಾಂಸ್ಕೃತಿಕ ಸೌರಭ

ದಾವಣಗೆರೆ, ಮಾ.4- ವನಿತಾ ಸಮಾಜ, ವನಿತಾ ಸಹಾಯ ಸಮಿತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಾ.6ರಂದು ಸಾಂಸ್ಕೃತಿಕ ಸೌರಭ ಹಾಗೂ ಸೇವಾ ಕಾರ್ಯಕ್ರಮವನ್ನು ಸಂಜೆ 6 ಗಂಟೆಗೆ ನಗರದ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ.

ಸಮಾಜದ ಗೌರವಾಧ್ಯಕ್ಷೆ, ಮಾಜಿ ಸಚಿವೆ ಡಾ. ನಾಗಮ್ಮ ಕೇಶವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಿರುತೆರೆ ಹಿರಿಯ ಕಲಾವಿದೆ ವಿದ್ಯಾ ಮೂರ್ತಿ, ಉದಯೋನ್ಮುಖ ಕಲಾವಿದೆ ಟಿ.ವಿ.ಮಲ್ಲಿಕಾ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ವನಿತಾ ಸಮಾಜದ ಅಧ್ಯಕ್ಷೆ ಗೀತಾ ಪ್ರಸಾದ್ ತಿಳಿಸಿದರು.

ಮಹಿಳೆಯರಿಂದ ಸಂಗೀತ, ನೃತ್ಯ, ಹಾಸ್ಯ, ಉಡುಗೆ-ತೊಡುಗೆ, ಅಡುಗೆ ಆಟ ಮುಂತಾದ ಸ್ಪರ್ಧೆಗಳು ಜರುಗಲಿವೆ. ಪ್ರತಿ ಸುತ್ತಿನಲ್ಲೂ 20 ಬಹುಮಾನ ನೀಡಲಾಗುವುದು. ಸೇವಾ ಕಾರ್ಯಗಳಿಗೆ ಹಣ ಸಂಗ್ರಹಿಸುವ ಉದ್ದೇಶದಿಂದ ಸ್ಪರ್ಧಿಗಳಿಗೆ 100 ರೂ. ಪ್ರವೇಶ ಶುಲ್ಕ ನಿಗದಿ ಪಡಿಸಲಾಗಿದೆ. ಇದಲ್ಲದೆ, ಬೆಳಗ್ಗೆ 11 ಗಂಟೆಯಿಂದ ರಾತ್ರಿ 8ರವರೆಗೆ ಗೃಹೋತ್ಪನ್ನ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಇರುತ್ತದೆ ಎಂದು ಹೇಳಿದರು.

ವನಿತಾ ಸಮಾಜದ ಕಾರ್ಯದರ್ಶಿ ಸೌಮ್ಯ ಪುನೀತ್, ಸಂಚಾಲಕಿ ಮಂಜುಳಾ ಬಸವಲಿಂಗಪ್ಪ, ವನಿತಾ ಸಹಾಯ ಸಮಿತಿ ಅಧ್ಯಕ್ಷೆ ಪದ್ಮಾ ಪ್ರಕಾಶ್, ಕಾರ್ಯದರ್ಶಿ ಹೇಮಾ ಶ್ರೀನಿವಾಸ್ ಇದ್ದರು.

## ಆರೋಗ್ಯ ಇಲಾಖೆ ಎನ್ ಹೆಚ್‌ಎಂ ಗುತ್ತಿಗೆ ನೌಕರರಿಗೆ ಅನ್ಯಾಯ



ದಾವಣಗೆರೆ, ಮಾ.4- ಕೋವಿಡ್ ಸಂಕಷ್ಟದಲ್ಲಿ ತಮ್ಮ ಜೀವದ ಹಂಗನ್ನು ತೊರೆದು ಕೆಲಸ ಮಾಡಿದ ಆರೋಗ್ಯ ಇಲಾಖೆಯ ಎನ್.ಹೆಚ್.ಎಂ. ಗುತ್ತಿಗೆ ನೌಕರರಿಗೆ ರಾಜ್ಯ ಬಜೆಟ್ ನಲ್ಲಿ ಅನ್ಯಾಯ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಖಾಯಂಯೇತರ ನೌಕರರ ಒಕ್ಕೂಟ ಜಿಲ್ಲಾ ಸಮಿತಿ ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೋವಿಡ್ ಸಂಕಷ್ಟದ ಸಮಯದಲ್ಲಿ ಕೆಲಸ ಮಾಡಿರುವ ನೌಕರರಿಗೆ ಕೆಲಸ ಖಾಯಂ ಮಾಡುವುದಿರಲಿ, ಕನಿಷ್ಟ ಸುಪ್ರಿಂ ಕೋರ್ಟ್ ಆದೇಶವಾದ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಜಾರಿ ಮಾಡುವ ಕ್ರಮವನ್ನು ಈ ಬಜೆಟ್ ನಲ್ಲಿ ಘೋಷಣೆ ಮಾಡಿಲ್ಲ ಎಂದು ಆಕ್ಷೇಪಿಸಿದ್ದಾರೆ.


**ಉಚಿತ ತಪಸಾಣೆ ಮತ್ತು ಚಿಕಿತ್ಸಾ ಶಿಬಿರ**

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ
3 ದಿನಗಳ ಕಾಲ ವಿಶಿಷ್ಟವಾದ ಉಚಿತ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ.

♦ ಉಚಿತ ಮೂಳೆ ಸಾಂದ್ರತೆ ಪರೀಕ್ಷೆ ಮತ್ತು ಎಲ್ಲಾ ತರಹದ ನೋವುಗಳ ಚಿಕಿತ್ಸಾ ಶಿಬಿರ
ದಿನಾಂಕ 5.03.2022 ಸಮಯ ಬೆ 10 ರಿಂದ ಸಂಜೆ 4 ರ ತನಕ (ಝಂಡು ಫಾರ್ಮಸಿ ಪ್ರಸ್ತುತಿ)

♦ ಉಚಿತ ಮಕ್ಕಳ ಮತ್ತು ಸ್ತ್ರೀ ಸಂಬಂಧಿತ (ಗರ್ಭಕೋಶ) ರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ
(ದಿನಾಂಕ 06.03.2022 ಸಮಯ ಬೆ 10 ರಿಂದ ಸಂಜೆ 4 ರ ತನಕ)

♦ ಉಚಿತ ಉದರ (ಗ್ಯಾಸ್ಟ್ರಿಕ್ ಇತ್ಯಾದಿ) ರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ
(ದಿನಾಂಕ 7.03.2022 ಸಮಯ ಬೆ 10 ರಿಂದ ಸಂಜೆ 4 ರ ತನಕ)

ಮೇಲೆ ತಿಳಿಸಿದ ಶಿಬಿರಗಳಿಗೆ ಮೊದಲೇ ಹೆಸರು ನೋಂದಾಯಿಸಿದ 100 ಜನರಿಗೆ ಮಾತ್ರ.
ಆಸಕ್ತರು ಇಂದೇ ಸಂಪರ್ಕಿಸಿ

ANVAYA
**ಅನ್ವಯ ಆಯುರ್ವೇದ ಆಸ್ಪತ್ರೆ**
#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಫೋ: 08192 252228 ಮೊ: 86186 42929


## ಡೀಸೆಲ್ ಸಹಾಯಧನ, ಯಶಸ್ವಿನಿ, ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್

ರೈತರ ಆದಾಯ ಹೆಚ್ಚಳ ಮಾಡಲು ತಮ್ಮ ಸರ್ಕಾರ ಬಯಸಿದ್ದು ಕೃಷಿ ಯಂತ್ರೋಪಕರಣಗಳ ಬಳಕೆಗೆ ಉತ್ತೇಜನ ನೀಡಲು ಪ್ರತಿ ಎಕರೆಗೆ 250 ರೂ.ಗಳಂತೆ ಡೀಸೆಲ್ ಸಹಾಯಧನ ಒದಗಿಸಲು 600 ಕೋಟಿ ರೂಪಾಯಿ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಗ್ರಾಮೀಣ ರೈತರಿಗೆ ಆರೋಗ್ಯ ಸೇವೆ ಒದಗಿಸಲು ಪರಿಷ್ಕೃತ ರೂಪದಲ್ಲಿ ಯಶಸ್ವಿನಿ ಯೋಜನೆಯನ್ನು ಮರು ಜಾರಿ ಮಾಡಲು ಸರ್ಕಾರ ನಿರ್ಧರಿಸಿದ್ದು, ಇದಕ್ಕಾಗಿ ಮುನ್ನೂರು ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದಿದ್ದಾರೆ. ರಾಜ್ಯದಲ್ಲೇ ಮೊದಲ ಬಾರಿಗೆ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸಲಾಗುವುದು, ಗೋಶಾಲೆಗಳ ಸಂಖ್ಯೆಯನ್ನು ನೂರಕ್ಕೆ ಹೆಚ್ಚಳ ಮಾಡಲಾಗುವುದು ಎಂದವರು ಹೇಳಿದ್ದಾರೆ.

## ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

ದಾವಣಗೆರೆ, ಮಾ.4-ಧರ್ಮ ಫ್ರೆಂಡ್ಸ್ ಗ್ರೂಪ್ ಹಾಗೂ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಆಶ್ರಯದಲ್ಲಿ ನಗರ ದೇವತೆ ದುರ್ಗಮ್ಮ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ನಾಡಿದ್ದು ದಿನಾಂಕ 6 ರ ಭಾನುವಾರ ಬೆಳಿಗ್ಗೆ 9 ರಿಂದ ರಾತ್ರಿ 10 ರವರೆಗೆ ಜಿಲ್ಲಾ ಮಟ್ಟದ ಹೊನಲು - ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಕ್ರೀಡೆ ನಡೆಯುವ ಸ್ಥಳ ಡಿ.ಸಿ.ಎಂ ಟೌನ್‌ಶಿಪ್, ಅನಿಲ್ ಕುಂಬ್ಳೆ ಕ್ರೀಡಾಂಗಣ ದಾವಣಗೆರೆ, ಹೆಚ್ಚಿನ ಮಾಹಿತಿಗಾಗಿ 8050411098, 8088331393 ಸಂಖ್ಯೆಯನ್ನು ಸಂಪರ್ಕಿಸಬಹುದು.

## ಇಂದು ಸೂಳೆಕೆರೆ ಸಿದ್ದೇಶ್ವರ ಸ್ವಾಮಿ ತೇರು

ಸೂಳೆಕೆರೆ (ಶಾಂತಿಸಾಗರ) ಗ್ರಾಮದಲ್ಲಿ ಇಂದು ಬೆಳಿಗ್ಗೆ 8.30ಕ್ಕೆ ಶ್ರೀ ಸಿದ್ದೇಶ್ವರ ಸ್ವಾಮಿಯ ರಥೋತ್ಸವ ಮತ್ತು ಕಾರಣಿಕೋತ್ಸವ ಜರುಗಲಿದೆ. ಸಂಜೆ 5 ಗಂಟೆಗೆ ಕಾರಣಿಕೋತ್ಸವ ಉಚ್ಚರಣೆ.


ಕಾರ್ಯಕ್ರಮಕ್ಕೆ ಶಾಸಕ ಮಾಡಾಳು ವಿರುಪಾಕ್ಷಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಮಾಯಕೊಂಡ ಶಾಸಕ ಪ್ರೊ. ಎನ್. ಲಿಂಗಣ್ಣ, ಮಾಜಿ ಶಾಸಕರುಗಳಾದ ಮಹಿಮಾ ಪಟೇಲ್, ವಡ್ನಾಳ್ ರಾಜಣ್ಣ, ಜಿಪಂ ಮಾಜಿ ಅಧ್ಯಕ್ಷ ಕೆ.ಜಿ. ಬಸವಲಿಂಗಪ್ಪ, ಚನ್ನಗಿರಿ ತಾಪಂ ಮಾಜಿ ಅಧ್ಯಕ್ಷ ಕೆ.ಜಿ. ಮರುಳಸಿದ್ದಪ್ಪ (ಪಾಲಾಕ್ಷಿ) ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಕುರಿಗಾಹಿಗಳಿಗೆ ಸಂತೋಷ ಕೊಟ್ಟಿರುವ ಬಜೆಟ್



ದಾವಣಗೆರೆ, ಮಾ. 4 - ಮುಖ್ಯಮಂತ್ರಿಗಳು ಮಂಡಿಸಿರುವ ಬಜೆಟ್ ಕುರಿಗಾಹಿಗಳಿಗೆ ಸಂತೋಷ ತಂದಿದೆ ಎಂದು ದಾವಣಗೆರೆ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಜೋಗಪ್ಪರ ದೀಪಕ್ ತಿಳಿಸಿದ್ದಾರೆ.


ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ.) ಚಿತ್ತರಗಿ.ಇವರಿಂದ



**ಮಗ ಹೋದರೂ ಮಾಂಗಲ್ಯ ಬೇಕು**
ಹಾಸ್ಯ ಭರಿತ ಸಮಾಜಿಕ ನಾಟಕ
ಜ್ಯೂನಿಯರ್ ಟೈಗರ್ ಪ್ರಭಾಕರ್ ಇವರು ವಿಶೇಷ ಪಾತ್ರದಲ್ಲಿ
ಪ್ರತಿದಿನ 2 ಪ್ರದರ್ಶನಗಳು, ಮಧ್ಯಾಹ್ನ 3ಕ್ಕೆ ಸಂಜೆ 6ಕ್ಕೆ
ಟಿಕೆಟ್ ದರ 100/- ರೂ ಕೇವಲ 4 ದಿನಗಳು ಮಾತ್ರ
ದಾವಣಗೆರೆ ಪಿ.ಬಿ. ರಸ್ತೆ, (ಶ್ರೀ ನರಹರಿಶೇಟ್ ಕಲ್ಯಾಣ ಮಂಟಪದ ಎದುರಿಗೆ) ಟಿ.ಎಂ.ಪಿ.ಎನ್. ಕಾಂಪೌಂಡ್‌ನಲ್ಲಿ
ಸಂಚಾಲಕರು : ಮಂಜುನಾಥ್ ಜಾಲ್ಯಾಳ 98803 42862

**David Coaching Center**
Mr. David Mob: 94482 33494
- Teaching Experience - 32 Years
- Excellent Coaching in Maths & Science Subjects
- Summer Coaching and regular Batches for SSLC Students

**Summer Coaching Start From 25.03.2022 (Limited Seats only)**
Address : # 2491, Near Parashuram Laundry, Bakkeshwara School Main Road, M.C.C `A' Block, 9th Main, Davanagere.

**ಸ್ಕ್ರ್ಯಾಪ್ ಮರ್ಚೆಂಟ್ಸ್ ಕ್ರೆಡಿಟ್ ಕೋ-ಆ ಸೊಸೈಟಿ ಲಿ.**
ಓಲ್ಡ್ ಮಿಡ್ಲ್ ಸ್ಕೂಲ್ ರಸ್ತೆ, ಗುಜರಿ ಲೈನ್, ದಾವಣಗೆರೆ.

**ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ**

ಮೇಲ್ಕಂಡ ಸೊಸೈಟಿ ಅಧ್ಯಕ್ಷನಾದ **ಡಿ. ಹೆಚ್ .ಬಷೀರ್ ಅಹಮದ್** ಆದ ನಾನು ಈ ಮೂಲಕ ನಮ್ಮ ಸೊಸೈಟಿಯ ಗ್ರಾಹಕರಿಗೆ, ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಆರೋಗ್ಯ ನಿಮಿತ್ತ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯಲು ಅನಾನುಕೂಲವಾಗಿರುವುದರಿಂದ ದಿನಾಂಕ 28.02.2022ರಂದು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುತ್ತೇನೆ. ಸೊಸೈಟಿಗೂ, ನನಗೂ ಯಾವುದೇ ಸಂಬಂಧವಿರುವುದಿಲ್ಲ ಎಂದು ತಿಳಿಸುತ್ತೇನೆ.

**ಡಿ.ಹೆಚ್. ಬಷೀರ್ ಅಹಮದ್**

## ಹೆಚ್‌ಡಿಎಫ್‌ಸಿ ಬ್ಯಾಂಕ್ ಹದಡಿ ರಸ್ತೆಯ ನೂತನ ಶಾಖೆ ಉದ್ಘಾಟನೆ




ದಾವಣಗೆರೆ, ಮಾ.4- ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಹದಡಿ ರಸ್ತೆಯ ನೂತನ ಶಾಖೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್, ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ, ವರ್ತಕ ಬಿ.ಸಿ. ಉಮಾಪತಿ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಉದ್ಯಮಿ ಮಾಗನೂರು ಪ್ರಭು, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಚಾರ್ಟರ್ಡ್ ಅಕೌಂಟೆಂಟ್ ಅಸೋಸಿಯೇಷನ್ ಅಧ್ಯಕ್ಷ ಕಿರಣ್ ಎಲ್. ಪಾಟೀಲ್ ಉಪಸ್ಥಿತರಿದ್ದರು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು ಆಗಮಿಸಿ ನೂತನ ಶಾಖೆಗೆ ಶುಭ ಕೋರಿದರು. ಬ್ಯಾಂಕ್‌ನ ವಲಯ ಮುಖ್ಯಸ್ಥ ಬ್ರಾವೋ ಡಿ'ಕೊಸ್ಟ, ಕ್ಲಸ್ಟರ್ ಹೆಡ್ ಸಿ.ಬಿ. ಸತೀಶ್, ಶಾಖೆಯ ವ್ಯವಸ್ಥಾಪಕ ಶಿವಕುಮಾರ್ ಮಾಲಿ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

## ಕೃಷಿಕರು, ಕಾರ್ಮಿಕರು, ಸಾಮಾನ್ಯರ ಅನುಕೂಲವಾಗಿರುವ ಬಜೆಟ್



ದಾವಣಗೆರೆ, ಮಾ.4- ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದು ಮಂಡಿಸಿರುವ ಆಯ-ವ್ಯಯ ಅತ್ಯುತ್ತಮವಾಗಿದ್ದು, ಕೃಷಿಕರು, ಕಾರ್ಮಿಕರು ಮತ್ತು ಸಾಮಾನ್ಯರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಅಭಿಪ್ರಾಯಪಟ್ಟಿದ್ದಾರೆ.

ನಗರಕ್ಕೆ ವಿಮಾನ ನಿಲ್ದಾಣ ಸ್ಥಾಪನೆ ಮತ್ತು ಪ್ರತ್ಯೇಕ ಹಾಲು ಒಕ್ಕೂಟ ರಚನೆ ಹಾಗೂ ಪ್ರಕೃತಿ ವಿಕೋಪದಲ್ಲಿ ಉಸ್ತುವಾರಿಗೆ ಎಸ್.ಡಿ.ಆರ್.ಎಫ್. ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿರುವ ಮುಖ್ಯಮಂತ್ರಿಗಳನ್ನು ಅವರು ಅಭಿನಂದಿಸಿದ್ದಾರೆ. ಅಲ್ಲದೇ, ರಾಜ್ಯದ ಜನರಿಗೆ ಆರೋಗ್ಯ, ಶಿಕ್ಷಣ, ನಗರಾಭಿವೃದ್ಧಿಗೆ ಒತ್ತು ನೀಡಿರುವ ಮುಖ್ಯಮಂತ್ರಿಗಳ ಕ್ರಮ ಶ್ಲಾಘನೀಯ ಎಂದು ಅವರು ತಿಳಿಸಿದ್ದಾರೆ.

ಸರ್ವರನ್ನೂ ಸಂತೃಪ್ತಿಗೊಳಿಸುವ ನಿಟ್ಟಿನಲ್ಲಿ ಹೊಸ ಚೈತನ್ಯ ನೀಡುವಂತಹ ಬಜೆಟ್ ಇದಾಗಿದೆ. ಜನರಿಗೆ ಹೊಸ ತೆರಿಗೆಯನ್ನು ವಿಧಿಸದೇ ಬಜೆಟ್ ಮಂಡಿಸಿರುವುದು ಸ್ವಾಗತಾರ್ಹ ಎಂದು ಅವರು ಹೇಳಿದ್ದಾರೆ.

## ರೈತರಿಗೆ ಅನುಕೂಲ ಮಾಡಿಕೊಟ್ಟಿರುವ ಬಜೆಟ್



ದಾವಣಗೆರೆ, ಮಾ.4- ರೈತರಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಆಯ-ವ್ಯಯ ಮಂಡಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕ್ರಮ ಸ್ವಾಗತಾರ್ಹ ಎಂದು ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ತಿಳಿಸಿದ್ದಾರೆ. ನೀರಾವರಿ ಯೋಜನೆಗಳಿಗೆ ಹೆಚ್ಚು ಒತ್ತು ಕೊಡುವುದರ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಲಾಗಿದೆ. ಅಲ್ಲದೇ, ಪ್ರವಾಸೋದ್ಯಮ ಮತ್ತು ದೇವಸ್ಥಾನಗಳ ಅಭಿವೃದ್ಧಿಗಳಿಗೆ ಸಹಕಾರ ಮತ್ತು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮಂಡಿಸಿರುವ ಬಜೆಟ್ ಉತ್ತಮವಾಗಿದೆ ಎಂದು ರಾಜಣ್ಣ ಅಭಿಪ್ರಾಯಪಟ್ಟಿದ್ದಾರೆ.

## ಹನುಮಾನ್ ದೇವಸ್ಥಾನದ ವಾರ್ಷಿಕೋತ್ಸವ

ಲೋಕಿಕೆರೆ ರಸ್ತೆಯಲ್ಲಿರುವ ಶ್ರೀ ವೀರ ಹನುಮಾನ್ ದೇವಸ್ಥಾನದ 11ನೇ ವಾರ್ಷಿಕೋತ್ಸವವು ಲೋಕಿಕೆರೆ ರಸ್ತೆಯ ಶ್ರೀ ವೀರ ಹನುಮಾನ್ ದೇವಸ್ಥಾನ ಸಮಿತಿಯಿಂದ ಇಂದು ನಡೆಯಲಿದೆ. ಬೆಳಿಗ್ಗೆ ಪ್ರಾತಃಕಾಲದಲ್ಲಿ ಸ್ವಾಮಿಗೆ ಅಭಿಷೇಕ, ಅಲಂಕಾರ ಮತ್ತು ನವಗ್ರಹ ಪೂಜಾ ಹೋಮ ಮತ್ತು ಪೂರ್ಣಾಹುತಿ, ಮಂಗಳಾರತಿ ನಡೆಯುವುದು. ಮಧ್ಯಾಹ್ನ 12 ಕ್ಕೆ ಪ್ರಸಾದ ಏರ್ಪಡಿಸಲಾಗಿದೆ.

## ಅತ್ಯಂತ ನೀರಸ, ಅಭಿವೃದ್ಧಿಯ ವಿರೋಧಿ, ದೂರದೃಷ್ಟಿ ಇಲ್ಲದ ಬಜೆಟ್

ದಾವಣಗೆರೆ, ಮಾ.4 - ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಮಂಡಿಸಿರುವ ತಮ್ಮ ಮೊದಲ ಬಜೆಟ್ ಅತ್ಯಂತ ನೀರಸ, ಅಭಿವೃದ್ಧಿಯ ವಿರೋಧಿ, ದೂರದೃಷ್ಟಿ ಇಲ್ಲದ ಬಜೆಟ್ ಆಗಿದೆ ಎಂದು ಶಾಸಕ ಡಾ|| ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಪ್ರತಿಕ್ರಿಯಿಸಿದ್ದಾರೆ.

ಬಸವರಾಜ ಬೊಮ್ಮಾಯಿ ತಮ್ಮ ಮಾತುಗಳ ಮೂಲಕ ಜನರಲ್ಲಿ ಬಹಳಷ್ಟು ನಿರೀಕ್ಷೆ ಮೂಡಿಸಿದ್ದರು. 'ನವ ಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣ ಮಾಡುತ್ತೇವೆ, ಭವಿಷ್ಯಕ್ಕಾಗಿ ದೃಢ ಹೆಜ್ಜೆ ಇಡುತ್ತೇವೆ' ಎಂದು ಹೇಳಿದ್ದನ್ನು ಮರೆತು ಆದರೆ ಬಜೆಟ್ ನೋಡಿದ ಮೇಲೆ ಅವರ ಮಾತುಗಳು ಹುಸಿಯಾಗಿವೆ ಎಂದಿದ್ದಾರೆ.




ದಾವಣಗೆರೆ ಜಿಲ್ಲೆಯನ್ನು ಸ್ವರ್ಗ ಮಾಡುತ್ತೇವೆ ಎನ್ನುತ್ತಿದ್ದ ದಾವಣಗೆರೆ ಮುಖಂಡರು ಕೇವಲ ವಿಮಾನ ನಿಲ್ದಾಣಕ್ಕೆ ಮತ್ತು ಎಸ್ ಡಿಆರ್ ಎಫ್ ಗೆ ರೂಪುರೇಷೆ ತಯಾರಿಸಲು ಅನುಮತಿ ಅಷ್ಟೇ ಪಡೆದಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಅತಿಹೆಚ್ಚು ಮೆಕ್ಕೆಜೋಳ ಬೆಳೆದರೂ ಸಹ ಪಕ್ಕದ ಜಿಲ್ಲೆಗೆ ಮೆಕ್ಕೆಜೋಳ ಅಭಿವೃದ್ಧಿ ಸಂಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಬಿಜೆಪಿಯವರು ನೀರಾವರಿ ಬಗ್ಗೆ ಬಹಳ ಮಾತಾಡುತ್ತಿದ್ದರು. ಬಜೆಟ್ (5ನೇ ಪುಟಕ್ಕೆ)

## ರೈತಪರ ಕಾಳಜಿಯುಳ್ಳ ಬಜೆಟ್



ದಾವಣಗೆರೆ, ಮಾ.4- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿರುವ ಬಜೆಟ್, ರೈತಪರ ಕಾಳಜಿಯುಳ್ಳ ಬಜೆಟ್ ಆಗಿದೆ ಎಂದು ಸಂಸದ ಡಾ. ಜಿ.ಎಂ.ಸಿದ್ದೇಶ್ವರ ಪ್ರತಿಕ್ರಿಯಿಸಿದ್ದಾರೆ.

ಕೃಷಿಯಲ್ಲಿ ಯಾಂತ್ರೀಕರಣ ಉತ್ತೇಜಿಸುವ ಸಲುವಾಗಿ ರೈತ ಶಕ್ತಿ ಯೋಜನೆಯಡಿ ರೈತರಿಗೆ ಎಕರೆಗೆ 250 ರೂಪಾಯಿಯ ಇಂಧನ ಒದಗಿಸುವ ನಿರ್ಧಾರ ಸ್ವಾಗತಾರ್ಹವಾಗಿದ್ದು, ಉಳಿದಂತೆ ಆರೋಗ್ಯ, ಶಿಕ್ಷಣ ಮತ್ತು ನಗರಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿರುವುದು ಎದ್ದು ಕಾಣುತ್ತದೆ. ದಾವಣಗೆರೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ (5ನೇ ಪುಟಕ್ಕೆ)

## ಸೆಂಟ್ರಿಂಗ್ ಹನುಮಂತಪ್ಪ ಮಡಿವಾಳರ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ, 2ನೇ ಮೇನ್,2ನೇ ಕ್ರಾಸ್ # 1033ರ ವಾಸಿ **ಸೆಂಟ್ರಿಂಗ್ ಹನುಮಂತಪ್ಪ ಮಡಿವಾಳರ** ಇವರು ದಿನಾಂಕ 04.03.2022ರ ಶುಕ್ರವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.03.2022ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ: ಮೊ: 95354 30184, 63604 73262













JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte